ಸುದ್ದಿ ಸಿಂಚನ

ಆ.21ರಿಂದ ಸಮಾಧಾನ ಸಮಾರೋಹ

ರಬಕವಿ-ಬನಹಟ್ಟಿ: ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿಯಿರುವ ವ್ಯಾಜ್ಯಗಳ ಪರಿಹಾರಕ್ಕೆ ಸಮಾಧಾನ ಸಮಾರೋಹ ಎಂಬ ಹೆಸರಿನಡಿ ವಿಶೇಷ ಲೋಕ ಆದಾಲತ್ ಆ.21, 22 ಮತ್ತು 23ರಂದು ಹಮ್ಮಿಕೊಳ್ಳಲಾಗಿದೆ ರಬಕವಿ-ಬನಹಟ್ಟಿ ತಾಲೂಕಿನ ಸಾರ್ವಜನಿಕರು ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಸೌಹಾರ್ದಯುತ ಹಾಗೂ ತ್ವರಿತ ಇತ್ಯರ್ಥಪಡಿಸುವ ಅವಕಾಶವಿದ್ದು, ಈ ಕಾರ್ಯಕ್ರಮದಲ್ಲಿ ರಬಕವಿ-ಬನಹಟ್ಟಿ ತಾಲೂಕಿನ ಸಂಬಂಧಿಸಿದ ಪ್ರಕರಣಗಳನ್ನು ಸಮಾಧಾನ ಸಮಾರೋಹ ಕಾರ್ಯಕ್ರಮದಲ್ಲಿ ಮಧ್ಯಸ್ಥಿಕೆದಾರರ ಮಾರ್ಗದರ್ಶನದಲ್ಲಿ ಉಭಯ ಪಕ್ಷಗಾರರು ಒಮ್ಮತದ ನಿರ್ಧಾರಕ್ಕೆ ಬರಲು ವೇದಿಕೆ ಕಲ್ಪಿಸುತ್ತದೆ. ಅರ್ಜಿದಾರರು ಈ ಅವಕಾಶ ಬಳಸಿಕೊಂಡು ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಿಕೊಳ್ಳಬೇಕೆಂದು ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

25, 26 ಎಸ್ ಬಿಐ ನೌಕರರ ಮುಷ್ಕರ

ಬಾಗಲಕೋಟೆ: ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಆಲ್ ಇಂಡಿಯಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸ್ಟಾಫ್ ಫೆಡರೇಷನ್ ವತಿಯಿಂದ ಮೇ 25, 26ರಂದು ಮುಷ್ಕರ ಹಮ್ಮಿಕೊಳ್ಳಲಾಗಿದೆ. ಮೆಸೆಂಜರ್‌ಗಳು ಮತ್ತು ಶಸ್ತ್ರಸಜ್ಜಿತ ರಕ್ಷಕರನ್ನು ತಕ್ಷಣ ನೇಮಕಗೊಳಿಸುವುದು, 2019ರಿಂದ ಸೇರ್ಪಡೆಯಾದ ನೌಕರರಿಗೆ ಐಸಿಟಿ ವರ್ಗಾವಣೆ ಜಾರಿಗೊಳಿಸುವುದು, ಶಾಶ್ವತ ಹುದ್ದೆಗಳ ಹೊರಗುತ್ತಿಗೆ ನಿಲ್ಲಿಸುವುದು, ವೇತನ ಸಮಾನತೆ ಸಮಸ್ಯೆ ಪರಿಹರಿಸುವುದು, ಎನ್ ಪಿಎಸ್ ವ್ಯಾಪ್ತಿಗೆ ಒಳಪಡುವ ನೌಕರರಿಗೆ ಪಿಂಚಣಿ ನಿಧಿ ನಿರ್ವಹಣೆ ಬದಲಾಯಿಸಲು ಆಯ್ಕೆ ಒದಗಿಸುವುದು, ಸಮರ್ಪಕ ಸಿಬ್ಬಂದಿ ನೇಮಕಾತಿ, ವೈದ್ಯಕೀಯ ಮರುಪಾವತಿ ಯೋಜನೆ ಸುಧಾರಣೆ ತರುವುದು ಸೇರಿದಂತೆ ಹಲವು ಬೇಡಿಕೆ ಈಡೇರಿಸಲು ಆಗ್ರಹಿಸಿ ಮುಷ್ಕರ ನಡೆಸಲಾಗುವುದು. ಸಾರ್ವಜನಿಕರು ಸಹಕರಿಸಬೇಕು ಎಂದು ಸ್ಟೇಟ್ ಬ್ಯಾಂಕ್ ಸ್ಟಾಫ್ ಯುನಿಯನ್ (ಕರ್ನಾಟಕ) ಪ್ರಧಾನ ಕಾರ್ಯದರ್ಶಿ ಎಂ.ರವಿಕುಮಾರ್‌ತಿಳಿಸಿದ್ದಾರೆ.

11ರಂದು ಬೃಹತ್ ಉದ್ಯೋಗ ಮೇಳ

ಸಿಂದಗಿ: ನಗರದ ಸಾರಂಗಮಠದ ಶ್ರೀ ಪದ್ಮರಾಜ ವಿದ್ಯಾವರ್ಧಕ ಸಂಸ್ಥೆಯ ಜಿ.ಪಿ.ಪೋರವಾಲಾ ಕಲಾ ವಾಣಿಜ್ಯ ಹಾಗೂ ವಿ.ವಿ.ಶಾಲಿ ಮಟ್ ವಿಜ್ಞಾನ ಮಹಾವಿದ್ಯಾಲಯದಲ್ಲಿ ನಿರ್ಮಾಣ ಸಂಸ್ಥೆಯ ಸಂಯೋಗದಲ್ಲಿ ಮೇ 11ರಂದು ಬೆಳಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ. ಟಾಟಾ, ಹೋಂಡಾ, ಟಿವಿಎಸ್, ಏಷಿಯನ್ ಪೇಂಟ್ಸ್, ಟೊಯೋಟಾ, ಆದಿತ್ಯ ಹೆಲ್ತ್‌ಕೇರ್, ಐಫೋನ್, ಷಾ ಹುಂಡೈ, ಲೂಮ್ಯಾಕ್ಸ್, ಎಚ್‌ಡಿಎಫ್‌ಸಿ ಬ್ಯಾಂಕ್, ಆರ್‌ಬಿಎಲ್ ಬ್ಯಾಂಕ್, ಐಸಿಐಸಿಐ ಬ್ಯಾಂಕ್ ಸೇರಿ ಬೆಂಗಳೂರಿನ ಪ್ರತಿಷ್ಠಿತ 25ಕ್ಕಿಂತ ಅಧಿಕ ಕಂಪನಿಗಳು ಭಾಗವಹಿಸಲಿವೆ. ಒಟ್ಟು 5 ಸಾವಿರಕ್ಕಿಂತ ಅಧಿಕ ಉದ್ಯೋಗ ಅವಕಾಶಗಳಿವೆ. ಕೆಲವು ಕಂಪನಿಗಳು ಸ್ಥಳದಲ್ಲಿಯೇ ನೇಮಕಾತಿ ಆದೇಶ ಪತ್ರ ನೀಡಲಿವೆ. ಎಸ್ಸೆಸ್ಸೆಲ್ಸಿ, ಪಿಯುಸಿ, ಐಟಿಐ, ಡಿಪ್ಲೋಮಾ ಪದವಿ ಹೊಂದಿದವರು ಭಾಗವಹಿಸಬಹುದು. ಅಭ್ಯರ್ಥಿಗಳು ಶೈಕ್ಷಣಿಕ ಆರೋಗ್ಯ ದಾಖಲಾತಿಗಳು, ಆಧಾರ್‌ಕಾರ್ಡ್ ಇತ್ತೀಚಿನ ಭಾವಚಿತ್ರ, ವೈಯಕ್ತಿಕ ಪರಿಚಯದೊಂದಿಗೆ ಪ್ರಚಾರದ ಬಿತ್ತಿ ಪತ್ರದಲ್ಲಿರುವ ಕ್ಯೂಆರ್‌ಕೋಡ್‌ಗೆ ಸ್ಕ್ಯಾನ್ ಮಾಡಿ ನೋಂದಾವಣೆ ಮಾಡಬಹುದಾಗಿದೆ. ಮೊ.9845610183 ಸಂಪರ್ಕಿಸಿ.

ಜಲಾಶಯ ಮಟ್ಟ

ಆಲಮಟ್ಟಿ

- ಗರಿಷ್ಠ ಮಟ್ಟ..................519.60ಮೀ.
- ಇಂದಿನ ಮಟ್ಟ................509.47ಮೀ.
- ಒಳಹರಿವು.....................ಇಲ್ಲ
- ಹೊರಹರಿವು..................1,076 ಕ್ಯು

ಘಟಪ್ರಭಾ

- ಗರಿಷ್ಠ ಮಟ್ಟ.................2175.00ಮೀ.
- ಇಂದಿನ ಮಟ್ಟ............2110.783ಮೀ.
- ಒಳಹರಿವು.....................ಇಲ್ಲ
- ಹೊರಹರಿವು..................143 ಕ್ಯು



ಬನಶಂಕರಿಯಲ್ಲಿ ಅಖಿಲ ಭಾರತ ದೇವಾಂಗ (ನೇಕಾರ) ಜಾಗೃತಿ ಸಮಾವೇಶ-2026, ದಯಾನಂದ ಪುರಿ ಸ್ವಾಮೀಜಿಗಳ 36ನೇ ವರ್ಷದ ಪಟ್ಟಾಭಿಷೇಕ ಹಾಗೂ ತುಲಾಭಾರ ಸಮಾರಂಭದಲ್ಲಿ ಬೆಳಗಾವಿ ದಕ್ಷಿಣ ಶಾಸಕ ಅಭಯ ಪಾಟೀಲ ಅವರು ವಚನಕಾರ ದೇವರ ದಾಸಿಮಯ್ಯನವರ ಇಂಗ್ಲಿಷ್ ವಚನಗಳ ಕೃತಿ ಬಿಡುಗಡೆ ಮಾಡಿದರು. ಹಂಪಿ ಹೇಮಕೂಟದ ದಯಾನಂದ ಪುರಿ ಸ್ವಾಮೀಜಿ, ಶಾಸಕರಾದ ಭೀಮಸೇನ ಚಿಮ್ಮನಕಟ್ಟಿ, ಅಭಯ ಪಾಟೀಲ ಸಂಸದ ಗದ್ದಿಗೌಡರ, ರವೀಂದ್ರ ಕಲಬುರ್ಗಿ, ರಾಜ್ಯಸಭಾ ಸದಸ್ಯ ಕೆ.ನಾರಾಯಣ ಸಮಾಜದ ಮುಖಂಡರು ಇತರರು ಇದ್ದರು.

ಚಿತ್ರದುರ್ಗಕ್ಕೆ 5000 ಕಾರ್ಯಕರ್ತರ ಪ್ರಯಾಣ



ಇಳಕಲ್ಲ: ನಾಡು ಕಂಡ ಧೀಮಂತ ನಾಯಕ, ರೈತರ ಕಣ್ಮಣಿ ಬಿ.ಎಸ್. ಯಡಿಯೂರಪ್ಪ ಅವರ 50ನೇ ರಾಜಕಿಯೋತ್ಸವದ ಅಭಿನಂದನಾ ಸಮಾರಂಭಕ್ಕೆ ಇಳಕಲ್ಲದಿಂದ 5000ಕ್ಕೂ ಅಧಿಕ ಜನ ಭಾಗವಹಿಸಲಿದ್ದಾರೆ ಎಂದು ಮಾಜಿ ಶಾಸಕ ದೊಡ್ಡನಗೌಡ ಪಾಟೀಲ ತಿಳಿಸಿದರು.ರೈತರ ಮತ್ತು ನೇಕಾರರ ಅಭಿವೃದ್ಧಿಗಾಗಿ ಅನೇಕ ಯೋಜನೆ ರೂಪಿಸಿದ ಬಿಎಸ್‌ವೈ ರೈತರ, ನೇಕಾರರ ಸಾಲ ಮನ್ನಾ ಮಾಡಿದ ಧೀಮಂತ ನಾಯಕ. ರಾಜ್ಯದಲ್ಲಿ ಬಿಜೆಪಿ ಪಕ್ಷ ಬಲ ಪಡಿಸಲು ಹಗಲಿರಳು ದುಡಿದ ನಾಯಕ. ಮತಕ್ಷೇತ್ರದ ಅಭಿವೃದ್ದಿಗೆ ಅನುದಾನ ಕೊಟ್ಟು ಇಳಕಲ್ಲ ಹಾಗೂ ಹುನಗುಂದ ನಗರ ಮತ್ತು ಗ್ರಾಮೀಣ ಪ್ರದೇಶದ ಜನರಿಗೆ ಶಾಶ್ವತ ಕುಡಿಯುವ ನೀರಿಗಾಗಿ ಅನುದಾನ ಕೊಟ್ಟ ಅಭಿವೃದ್ಧಿಯ ಹರಿಕಾರ. ಇಂತಹ ಧೀಮಂತ ನಾಯಕನ ಸುದೀರ್ಘ 50 ವರ್ಷದ ರಾಜಕೀಯ ಜೀವನ ಸಾಗಿಸಿದ ಅವರ ಅಭಿನಂದನಾ ಕಾರ್ಯಕ್ರಮಕ್ಕೆ ಸಾಕ್ಷಿಯಾಗುತ್ತಿರುವುದು ನಮಗೆಲ್ಲರಿಗೂ ಹೆಮ್ಮೆ ಎಂದು ತಿಳಿಸಿದ್ದಾರೆ.

ಯುವಕರು ಇಂದ್ರಿಯಗಳ ನಿಗ್ರಹಿಸಿ ಧರ್ಮದ ಹಾದಿಯಲ್ಲಿ ನಡೆಯಬೇಕು

ಜಂಗಮ ವಟುಗಳಿಗೆ ಅಯ್ಯಾಚಾರ ತುಲಾಭಾರ ಕಾರ್ಯಕ್ರಮ

• **ಕನ್ನಡಪ್ರಭ ವಾರ್ತೆ** ಮಹಾಲಿಂಗಪುರ

ಸಾಧನೆ ಮಾಡಲು ಯೌವನ ಕಾಲವೇ ಅತ್ಯಂತ ಸೂಕ್ತ. ಬಾಲ್ಯದಲ್ಲಿ ಬುದ್ಧಿ, ವೃದ್ಧಾಪ್ಯದಲ್ಲಿ ಶಕ್ತಿ ಇರುವುದಿಲ್ಲ. ಆದ್ದರಿಂದ ಯುವಕರು ಇಂದ್ರೀಯಗಳನ್ನು ನಿಗ್ರಹಿಸಿ ಧರ್ಮದ ಹಾದಿಯಲ್ಲಿ ನಡೆಯಬೇಕು. ಮಕ್ಕಳಿಗೆ ಲಿಂಗ ಮತ್ತು ರುದ್ರಾಕ್ಷಿ ಧರಿಸುವುದರ ಮಹತ್ವವನ್ನು ಪೋಷಕರು ತಿಳಿಸಿಕೊಡಬೇಕು ಎಂದು ಸಾಲಹಳ್ಳಿಯ ಚಿಪ್ಪಲಕಟ್ಟಿ ಬೃಹನ್ಮಠದ ಅಭಿನವ ಸಿದ್ಧಲಿಂಗ ಶಿವಾಚಾರ್ಯರು ಹೇಳಿದರು.

ಪಟ್ಟಣದ ಮಹಾಲಿಂಗೇಶ್ವರ ಮಠದಲ್ಲಿ ಗುರುಲಿಂಗೇಶ್ವರ ಸ್ವಾಮೀಜಿ 61ನೇ ವರ್ಷದ ಪುಣ್ಯಾರಾಧನೆ ನಿಮಿತ್ತ ಜಂಗಮ ಕ್ಷೇಮಾಭಿವೃದ್ಧಿ ಸಂಘದಿಂದ ಬುಧವಾರ ಹಮ್ಮಿಕೊಂಡ ಜಂಗಮ ವಟುಗಳಿಗೆ ಅಯ್ಯಾಚಾರ, ಮಹಾಲಿಂಗೇಶ್ವರ ಸ್ವಾಮೀಜಿ ಜನ್ಮಶತಾಬ್ದಿ ಹಾಗೂ ತುಲಾಭಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಮಕ್ಕಳಿಗೆ ಬಾಲ್ಯದಿಂದಲೇ ಸಂಸ್ಕಾರ ನೀಡುವುದು ಅತ್ಯಗತ್ಯ. ಕಲ್ಲಿಗೆ ಸಂಸ್ಕಾರ ನೀಡಿದರೆ ಅದು ಶಿಲೆಯಾಗುತ್ತದೆ, ನೀರಿಗೆಸಂಸ್ಕಾರನೀಡಿದರೆಪಾದೋದಕವಾಗುತ್ತದೆ ಮತ್ತು ಅನ್ನಕ್ಕೆ ಸಂಸ್ಕಾರ ನೀಡಿದರೆ ಅದು ಪ್ರಸಾದವಾಗುತ್ತದೆ. ಅಂತೆಯೇ, ಮಕ್ಕಳಿಗೆ ಸಂಸ್ಕಾರ ನೀಡಿದರೆ ಅವರು ಮಹಾಮಾನವ ಆಗುತ್ತಾರೆ ಎಂದರು.

ಭಕ್ತರ ಮನೆಗೆ ಪೂಜೆ-ಪುನಸ್ಕಾರಗಳಿಗೆ ಹೋಗುವ ಜಂಗಮರು ಮೊದಲು ಯೋಗ್ಯರಾಗಿರಬೇಕು. ಅವರ ನಡವಳಿಕೆ ಸರಿಯಿಲ್ಲದಿದ್ದರೆ ಭಕ್ತರು ಅವರನ್ನು ಗೌರವಿಸುವುದಿಲ್ಲ. ಜಂಗಮರು ಮಾಂಸಾಹಾರ ಅಥವಾ ನಿಷೇಧಿತ ವಸ್ತುಗಳ ಸೇವನೆಯಿಂದ ದೂರವಿರಬೇಕು. ಸಮಾಜದಲ್ಲಿ ಆದರ್ಶಪ್ರಾಯವಾಗಿ ಬಾಳಬೇಕು ಎಂದು ಸಲಹೆ ನೀಡಿದರು.



ಮಹಾಲಿಂಗಪುರದ ಮಹಾಲಿಂಗೇಶ್ವರ ಮಠದಲ್ಲಿ ಜಂಗಮ ಕ್ಷೇಮಾಭಿವೃದ್ಧಿ ಸಂಘದಿಂದ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಮಹಾಲಿಂಗೇಶ್ವರ ಸ್ವಾಮೀಜಿ ತುಲಾಭಾರ ನೆರವೇರಿಸಲಾಯಿತು.

100ಕ್ಕೂ ಅಧಿಕ ಜಂಗಮ ವಟುಗಳಿಗೆ ಅಯ್ಯಾಚಾರ ದೀಕ್ಷೆ ನೀಡಲಾಯಿತು. ನಂತರ ಮಹಾಲಿಂಗೇಶ್ವರ ಶಿವಯೋಗಿ ರಾಜೇಂದ್ರ ಸ್ವಾಮೀಜಿಗೆ ತುಲಾಭಾರ ನೆರವೇರಿಸಲಾಯಿತು. ಕಾರ್ಯಕ್ರಮಕ್ಕೂ ಮುನ್ನ ಗುರುಲಿಂಗೇಶ್ವರ ಸ್ವಾಮೀಜಿ ಗದ್ದುಗೆಗೆ ರುದ್ರಾಭಿಷೇಕ ಮಾಡಲಾಯಿತು.

ಗುರುಪಾದಯ್ಯ ಚಟ್ಟಿಮಠ ಅಧ್ಯಕ್ಷತೆ ವಹಿಸಿದ್ದರು. ಮಹಾಂತೇಶ ಹಿಟ್ಟಿನಮಠ, ಬಸವರಾಜ ಹಿಟ್ಟಿನಮಠ, ವಿ.ಐ. ಪಂಚಕಟ್ಟಿಮಠ, ಗುರುಲಿಂಗಯ್ಯ ಮಠಪತಿ, ಬಸಯ್ಯ ಚಟ್ಟಿಮಠ, ಬಿ.ಎಂ. ಅಯ್ಯನಗೌಡರ, ಮಹಾಂತೇಶ ಮನ್ನಯ್ಯನವರಮಠ, ಚನ್ನಯ್ಯ ಮಸಗುಪ್ಪಿಮಠ, ಸಾಗರ ಮಠದ, ಈರಣ್ಣ ಚಟ್ಟಿಮಠ, ಸಂಗಯ್ಯ ವಸ್ತ್ರದ, ಸದಾಶಿವ ಹಿರೇಮಠ, ರವಿ ಹಿರೇಮಠ, ಪರಯ್ಯ ಮಠದ, ಮೃತ್ಯುಂಜಯ ಮಠಪತಿ ಇತರರು ಇದ್ದರು.

ಮಾನವೀಯತೆಯಿಂದ ಶಾಂತಿ ನೆಲೆಸಲಿದೆ



• **ಕನ್ನಡಪ್ರಭ ವಾರ್ತೆ** ಜಮಖಂಡಿ

ಮಾನವೀಯತೆ ಜೀವನವನ್ನು ಉತ್ತುಂಗ ಸ್ಥಿತಿಗೆ ತೆಗೆದುಕೊಂಡು ಹೋಗುತ್ತದೆ. ಇದರಿಂದ ಶಾಂತಿ ನೆಲೆಸಲು ಸಾಧ್ಯವಾಗುತ್ತದೆ ಎಂದು ಪ್ರಾಚಾರ್ಯ ಪ್ರೊ.ಕೆ.ಜೆ. ಜೀರಗಾಳಿ ಅಭಿಪ್ರಾಯಪಟ್ಟರು.

ಬಿ.ಎಲ್.ಡಿ.ಇ ಶಿಕ್ಷಣ ಮಹಾವಿದ್ಯಾಲಯದಲ್ಲಿ ಶುಕ್ರವಾರ ವಿಶ್ವ ರೆಡ್ ಕ್ರಾಸ್ ದಿನಾಚರಣೆ ನಿಮಿತ್ತ ಹಮ್ಮಿಕೊಂಡಿದ್ದ ಚಿತ್ತಕಲಾ ಸ್ಪರ್ಧೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮಾನವ ಜೀವನವನ್ನು ಸಾರ್ಥಕ ಪಡಿಸಿಕೊಳ್ಳಲು ಮಾನವೀಯತೆ ಅವಶ್ಯ, ವಿಶ್ವಗುರು ಬಸವಣ್ಣನವರು ಹೇಳಿದಂತ ದಯೆಯೇ ದರ್ಮದ ಮೂಲವಾಗಿದೆ ಎಂದು ತಿಳಿಸಿದರು. ಕಾಲೇಜಿನ ಸಹ ಪ್ರಾಧ್ಯಾಪಕ ಪ್ರೊ.ಎಲ್.ಎಂ. ಮಾರ್ಕಪನಳ್ಳಿ ಮಾತನಾಡಿ, ರೆಡ್ ಕ್ರಾಸ್ ವಿಭಾಗದ ಅಡಿಯಲ್ಲಿ ಪ್ರತಿ ವರ್ಷ ಹಲವಾರು ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತದೆ. ರಕ್ತದಾನ ಶಿಬಿರ ಹಾಗೂ ಜಾಗೃತಿ ಕಾರ್ಯಕ್ರಮಗಳ ಕುರಿತು ವಿವರಿಸಿದರು. ಪ್ರಶಿಕ್ಷಣಾರ್ಥಿಯಾದ ಪ್ರಸಾದ ಮಾಳಿ ಅನಿಸಿಕೆ ಹಂಚಿಕೊಂಡರು.ವಿಶ್ವ ರೆಡ್ ಕ್ರಾಸ್ ದಿನದ ನಿಮಿತ್ತ ಜನರಲ್ಲಿ ಜಾಗೃತಿ ಮೂಡಿಸುವ ಕುರಿತು ಪ್ರಶಿಕ್ಷಣಾರ್ಥಿಗಳಿಗೆ ಚಿತ್ರಕಲೆ ಸ್ಪರ್ಧೆ ಏರ್ಪಡಿಸಲಾಗಿತ್ತು.

ರೆಡ್ ಕ್ರಾಸ್ ವಿಭಾಗದ ಮುಖ್ಯಸ್ಥೆ ಪ್ರೊ.ಅಶ್ವಿನಿ ಅನಂತಪೂರ, ಪ್ರೊ.ವಿಶಾಲಾಕ್ಷಿ ಸಿದರೆಡ್ಡಿ ವೇದಿಕೆಯಲ್ಲಿದ್ದರು. ಮಧು ಮಠಪತಿ ಪ್ರಾರ್ಥನಾ ಗೀತೆ ಹಾಡಿದರು. ಸುಶ್ಮಿತಾ ಮಂಟೂರು ಸ್ವಾಗತಿಸಿದರು. ಅಲ್ಲಮಪ್ರಭು ವಾಜಂತ್ರಿ ಹಾಗು ಪಾರ್ವತಿ ಪೂಜಾರಿ ಕಾರ್ಯಕ್ರಮ ನಿರೂಪಿಸಿದರು. ಮಹನಂದಾ ತೇಲಿ ವಂದಿಸಿದರು.

ದಾನಮ್ಮ ಉತ್ಸವ ದೇಸಿ ಸಂಸ್ಕೃತಿಗೆ ಹಿಡಿದ ಕನ್ನಡಿ

• **ಕನ್ನಡಪ್ರಭ ವಾರ್ತೆ** ಮುಧೋಳ

ಭಾರತ ದೇಶವು ಉತ್ತಮ ಕಲೆ, ಸಾಹಿತ್ಯ, ಸಂಸ್ಕೃತಿಯ ತವರೂರು. ಇಲ್ಲಿ ಉತ್ತಮ ನಡೆ-ನುಡಿಯ ಆಚರಣೆಗಳಿವೆ. ಇಂತಹ ಮುಖ್ಯ ಭೂಮಿಕೆಗೆ ಕಾರಣವಾದದ್ದು ದಾನಮ್ಮ ಉತ್ಸವವಾಗಿದೆ. ಇದು ಭಾರತೀಯ ದೇಶೀಯ ಸಂಸ್ಕೃತಿಗೆ ಹಿಡಿದ ಕನ್ನಡಿಯಾಗಿದೆ. ಇದಕ್ಕೆ ವಿದ್ಯಾರ್ಥಿನಿಯರ ಪಾಲ್ಗೊಳ್ಳುವಿಕೆ ಹಾಗೂ ಸೃಜನಶೀಲ ಆಲೋಚನೆ ಬಹಳ ಅವಶ್ಯಕ ಎಂದು ಸ್ಥಳೀಯ ಬಸವೇಶ್ವರ ಪದವಿ ಪೂರ್ವ ಮಹಿಳಾ ಮಹಾವಿದ್ಯಾಲಯದ ಪ್ರಾಚಾರ್ಯ ಎಮ್.ಎ.ಮೋರೆ ಹೇಳಿದರು.

ನಗರದ ದಾನಮ್ಮದೇವಿ ಮಹಿಳಾ ಮಹಾವಿದ್ಯಾಲಯದ ಕಲಾ ಹಾಗೂ ವಾಣಿಜ್ಯ ವಿಭಾಗಗಳ ವತಿಯಿಂದ ಗುರುವಾರ ಆಯೋಜಿಸಿದ್ದ ದಾನಮ್ಮ ಉತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮುಖ್ಯ ಅತಿಥಿಗಳಗಿದ್ದ ಮುಧೋಳ ಕೌಟಿಲ್ಯ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ.ಆನಂದ ಮೇತ್ರಿ ಮಾತನಾಡಿ ವಿದ್ಯಾರ್ಥಿನಿಯರಲ್ಲಿ ಸಂಸ್ಕೃತಿಯ ಅರಿವು ಮೂಡಿಸುವಲ್ಲಿ ಇಂತಹ ಕಾರ್ಯಕ್ರಮಗಳು ಅವಶ್ಯಕವೆಂದರು.

ಇದೇ ಸಂದರ್ಭದಲ್ಲಿ ಕಾಲೇಜಿನ ವಿದ್ಯಾರ್ಥಿನಿಯರು ವಿವಿಧ ಕಲಾ ಮೇಳಗಳೊಂದಿಗೆ ವಿಭಿನ್ನ ಸಂಸ್ಕೃತಿಯ ವೇಷಭೂಷಣಗಳನ್ನು ಧರಿಸಿ ಡೊಳ್ಳು ಕುಣಿತ, ಕುಂಭ, ಆರತಿಯೊಂದಿಗೆ ವಿಜೃಂಭಣೆ ಯಿಂದ ಮೆರವಣಿಗೆಯಲ್ಲಿ ಪಾಲ್ಗೊಂಡರು. ಮೆರವಣಿಗೆಯು ನಗರದ ಪ್ರಮುಖ ಬೀದಿಗಳಲ್ಲಿ ಸಾಗಿ ಬಂದಿತು. ನಂತರ ಉತ್ತರ ಕರ್ನಾಟಕದ ಇಳಕಲ್ ಸೀರೆಯಲ್ಲಿ ದಾನಮ್ಮ ಉತ್ಸವ ನಾಮಾಂಕಿತ ಒಳಗೊಂಡ ಬ್ಯಾನರ್‌ಅನಾವರಣಗೊಳಿಸಿದ್ದು ಅತ್ಯಂತ ವಿಶೇಷವಾಗಿತ್ತು.

ಉತ್ಸವದನಿಮಿತ್ತ ಮಹಾವಿದ್ಯಾಲಯದ ಕಲಾ ಮತ್ತು ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ಯರಿಗಾಗಿ ಬಕೇಟಿನ ಲೋಟದಲ್ಲಿ ಕ್ವಾಯಿನ್ ಹಾಕುವ ಸ್ಪರ್ಧೆ, ಮ್ಯೂಸಿಕ್ ಚೇರ್‌ಮತ್ತು ಬಾಟಲ್ ಗೇಮ್, ಜಾನಪದ ನೃತ್ಯ ಮುಂತಾದ ಮನರಂಜನಾ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾಲೇಜಿನ ಪ್ರಾಚಾರ್ಯ ಡಾ.ಎಮ್.ಎಮ್.ಹಿರೇಮಠ ಅಧ್ಯಕ್ಷತೆವಹಿಸಿ ಮಾತನಾಡಿ ದಾನಮ್ಮೋತ್ಸವ ಒಂದು ಸಾಂಸ್ಕೃತಿಕ ಉತ್ಸವ. ಈ ಉತ್ಸವ ನಮ್ಮ ಸಂಸ್ಕೃತಿಯ ದ್ಯೂತಕ. ಇಂತಹ ಕಾರ್ಯಕ್ರಮಗಳ ಆಯೋಜನೆಯ ಯಶಸ್ಸು ವಿದ್ಯಾರ್ಥಿಗಳ ಪಾಲ್ಗೊಳುವಿಕೆಯ ಮೇಲೆ ಅವಲಂಬಿತವಾಗಿದೆ ಎಂದರು. ಸಾಂಕೃತಿಕ ವಿಭಾಗದ ಕಾರ್ಯಧ್ಯಕ್ಷರು ಹಾಗೂ ಕಲಾ ವಿಭಾಗದ ಮುಖ್ಯಸ್ಥ ಪ್ರೊ ಎಸ್.ಕೆ. ಸಾರವಾಡ ಸ್ವಾಗತಿಸಿದರು, ವಾಣಿಜ್ಯ ವಿಭಾಗದ ಮುಖ್ಯಸ್ಥೆ ಪ್ರೊ ಎ.ಎನ್.ಬಾಗೇವಾಡಿ ವಂದಿಸಿದರು, ಪ್ರೊ.ಮಲ್ಲಿಕಾರ್ಜುನ ಎಮ್. ನಿರೂಪಿಸಿದರು. ಮಹಾವಿದ್ಯಾಲಯದ ಎಲ್ಲ ಬೋಧಕ-ಬೋಧಕೇರ ಸಿಬ್ಬಂದಿ ಹಾಗೂ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.



ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಗುಳೇದಗುಡ್ಡ: ತಾಲೂಕಿನ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಗಳನ್ನು ಗಳಿಸಿದ ಸರ್ಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘವು ಆನ್ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆಅರ್ಜಿ ಸಲ್ಲಿಸಲು ಕೊನೆಯ ದಿನ ಮೇ 25 ಅಂತಿಮ ದಿನವಾಗಿದೆ. ಅರ್ಹ ವಿದ್ಯಾರ್ಥಿಗಳು ಆನ್ಲೈನ್ ಲಿಂಕ್ ಮೂಲಕ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸುವವಿಧಾನಸೇರಿಇತರೆಮಾಹಿತಿಗಾಗಿ ಕೆಎಸ್ ಜಿಎನ್ಯೂಡ್ ಯೂಟ್ಯೂಬ್ ಚಾನಲ್‌ಗೆ ಭೇಟಿ ನೀಡಬೇಕು. ಅರ್ಜಿ ಸಲ್ಲಿಸುವ ವಿದ್ಯಾರ್ಥಿಯು 2026ರ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ತೇರ್ಗಡೆಯಾಗಿರಬೇಕು. ತಂದೆ ಅಥವಾ ತಾಯಿ ರಾಜ್ಯ ಸರ್ಕಾರದ ನೌಕರರಾಗಿರಬೇಕು. ನಿಗಮ, ಮಂಡಳಿ, ಪ್ರಾಧಿಕಾರ, ವಿಶ್ವವಿದ್ಯಾಲಯ, ಖಾಸಗಿ ಹಾಗೂ ಅನುದಾನಿತ ವಿದ್ಯಾಸಂಸ್ಥೆಗಳಲ್ಲಿ ಕೆಲಸ ಮಾಡುವ ನೌಕರರ ಮಕ್ಕಳು ಅರ್ಜಿ ಸಲ್ಲಿಸುವಂತಿಲ್ಲ ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಗುಳೇದಗುಡ್ಡ ತಾಲೂಕು ಘಟಕದ ಅಧ್ಯಕ್ಷ ಪಿ.ವಿ.ಜಾಧವ ತಿಳಿಸಿದ್ದಾರೆ.

ಅಕ್ಷರ ಕಲಿಸಿದ ಗುರುಗಳಿಗೆ ವಂದನೆ ಸಲ್ಲಿಸೋದು ಕರ್ತವ್ಯ

• **ಕನ್ನಡಪ್ರಭ ವಾರ್ತೆ** ಸಾವಳಗಿ

ಅಕ್ಷರ ಕಲಿಸಿದ ಗುರುಗಳಿಗೆ ವಂದನೆ ಸಲ್ಲಿಸಬೇಕು. ಜೊತೆಗೆ ಹಳೆಯ ಶಾಲೆಯಲ್ಲಿ ಕಲಿತ ಶಾಲೆ ಸ್ನೇಹಿತರನ್ನು ಭೇಟಿಯಾಗಬೇಕು ಅನ್ನೋದು ಪ್ರತಿಯೊಬ್ಬ ವಿದ್ಯಾರ್ಥಿಯ ಕನಸಾಗಿರುತ್ತದೆ. ಆ ಕನಸನ್ನು ನನಸು ಮಾಡುವುದು ಅಷ್ಟು ಸುಲಭದ ಕೆಲಸವಲ್ಲ ಎಂದು ಹಳೆಯ ವಿದ್ಯಾರ್ಥಿ ಪ್ರೀಯಾಂಕ ಹೊಸುರ ಹೇಳಿದರು.



ಸಾವಳಗಿ ಸಮೀಪದ ಶೂರ್ಪಾಲಿ ಗ್ರಾಮದ ಸರಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ 2003-04ನೇ ಸಾಲಿನ 7ನೇ ತರಗತಿ ವಿದ್ಯಾರ್ಥಿಗಳ ಗುರುವಂದನೆ ಮತ್ತು ಸ್ನೇಹ ಸಮ್ಮಿಲನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಹಳೆಯ ವಿದ್ಯಾರ್ಥಿ ಅಪ್ಪು ನಾವ್ಹಿ ಮಾತನಾಡಿ, ಬಾಲ್ಯದಲ್ಲಿ ತುಂಟತನ, ಅಜ್ಞಾನ, ಅಶಿಸ್ತಿನಿಂದಿರುವ ಮಕ್ಕಳನ್ನು ಒಂದು ಹತೋಟಿಗೆ ತಂದು ವಿದ್ಯೆ ಕಲಿಸಿ ವಿದ್ಯಾರ್ಥಿ ಎಷ್ಟೇ ಮುಂದುವರಿದರೂ ಅದರ ಹಿಂದೆ ಗುರುವಿನ ಪಾತ್ರ ಇದ್ದೇ ಇರುತ್ತದೆ. ಗುರುಗಳಿಂದ ಬೆತ್ತದ ಏಟು ಬಿದ್ದಿದ್ದರಿಂದ ಇವತ್ತು ಸಮಾಜದಲ್ಲಿ ಒಳ್ಳೆಯ ಪ್ರಜೆಗಳಾಗಿ ರೂಪುಗೊಂಡಿದ್ದೇವೆ. ಪಾಠ ಕಲಿಸಿ ಜೀವನದ ಮೌಲ್ಯ ಕಲಿಸಿಕೊಟ್ಟ ಗುರುಗಳನ್ನು ಸ್ಮರಿಸಿ ಗುರುವಂದನೆ ಸಲ್ಲಿಸುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಹೇಳಿದರು. ಇದೇ ವೇಳೆ ಗುರುಪಾದ ತೇಲಿ ಮಾತನಾಡಿ, ಹಳೆಯ ವಿದ್ಯಾರ್ಥಿಗಳು ಎಲ್ಲರನ್ನೂ ಕಂಡು ಆಶ್ಚರ್ಯವಾಗಿದಂತೂ ಸುಳ್ಳಲ್ಲ. ಒಬ್ಬೊಬ್ಬರ ಮುಖದ ಚಹರೆ ಬದಲಾಗಿದೆ. ಅಂತಹವರನ್ನು ಪತ್ತೆ ಮಾಡಿ ಅವರ ಹೆಸರನ್ನು ಹೇಳಿಕೊಂಡು ಪರಿಚಯ ಮಾಡಿಕೊಂಡ ಪರಿ ಇದೆಲ್ಲವೂ ಕೂಡ ಹಾರುವ ಹಕ್ಕಿಗೆ ರೆಕ್ಕೆ ಪುಕ್ಕ ಬಂದಾಯಿತು ಎಂದರು. ಅಕ್ಷರ ಕಲಿಸಿದ ಗುರುಗಳಿಗೆ ವಿದ್ಯಾರ್ಥಿಗಳು ಪಾದಪೂಜೆ ಮಾಡಿ, ಪುಷ್ಪವೃಷ್ಟಿಗರೆದು ಬರಮಾಡಿಕೊಂಡರು.

ಅಧಿಕಾರ ಸ್ವೀಕಾರ...

ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಆಡಳಿತಕ್ಕೆ ಹೊಸ ರೂಪ ನೀಡುವೆ: ಬಿಡಿಟಿಎ ನೂತನ ಅಧ್ಯಕ್ಷ ಪ್ರಕಾಶ ತಪಶೆಟ್ಟಿ

ಬಿಟಿಡಿಎ ಅಧ್ಯಕ್ಷರಾಗಿ ಪ್ರಕಾಶ ತಪಶೆಟ್ಟಿ ಪದಗ್ರಹಣ

• **ಕನ್ನಡಪ್ರಭ ವಾರ್ತೆ** ಬಾಗಲಕೋಟೆ

ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಆಡಳಿತಕ್ಕೆ ಹೊಸ ರೂಪ ನೀಡುವ ಮೂಲಕ ಜನಪರ ಹಾಗೂ ಪಾದರ್ಶಕ ಆಡಳಿತಕ್ಕೆ ಆದ್ಯತೆ ನೀಡಲಾಗುವುದೆಂದು ಬಿಟಿಡಿಎ ನೂತನ ಅಧ್ಯಕ್ಷ ಪ್ರಕಾಶ ತಪಶೆಟ್ಟಿ ಹೇಳಿದರು.

ಬಿಟಿಡಿಎ ಕಚೇರಿಯಲ್ಲಿ ಶುಕ್ರವಾರ ಬಿಟಿಡಿಎ ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ನಂತರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು ಸಂಸ್ಥೆಯ ಅಭಿವೃದ್ಧಿ, ಸಾರ್ವಜನಿಕರ, ಸಂತ್ರಸ್ತರ ಸಮಸ್ಯೆಗಳಿಗೆ ಶೀಘ್ರ ಪರಿಹಾರ, ಮೂಲಭೂತ ಸೌಲಭ್ಯಗಳ ವೃದ್ಧಿ ಹಾಗೂ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗುವುದೆಂದು ತಿಳಿಸಿದರು.

ಮುಳುಗಡೆ ಸಂತ್ರಸ್ತರಿಗೆ ಪುನರ್ವಸತಿ ಹಾಗೂ ಪುನರ್‌ನಿರ್ಮಾಣದ ಕೆಲಸ ಸಮರ್ಪಕವಾಗಿ ಆಗಬೇಕಿದೆ.



ಬಿಟಿಡಿಎ ನೂತನ ಅಧ್ಯಕ್ಷ ಪ್ರಕಾಶ ತಪಶೆಟ್ಟಿ ಅವರು ಬಿಟಿಡಿಎ ಕಚೇರಿಯಲ್ಲಿ ಶುಕ್ರವಾರ ಬಿಟಿಡಿಎ ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಸಾರ್ವಜನಿಕರು, ಸಂತ್ರಸ್ತರು ಪದೇ ಪದೇ ಕಚೇರಿಗೆ ಬರುದನ್ನು ತಪ್ಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಜಾಗೃತಿಯಿಂದ, ಸುರಕ್ಷತೆಯಿಂದ ಸಾರ್ವಜನಿಕರ ತೊಂದರೆ ಹಾಗೂ ಬೇಡಿಕೆಗಳಿಗೆ ಸ್ಪಂದಿಸಿ, ಪಾರದರ್ಶಕವಾಗಿ ಕೆಲಸ ಕಾರ್ಯಗಳು ಆಗುವ ರೀತಿಯಲ್ಲಿ ಆಡಳಿತದಲ್ಲಿ ಸುಧಾರಣೆ ತರುವ ಕೆಲಸ ಮಾಡಲಾಗುತ್ತದೆ ಎಂದು ತಿಳಿಸಿದರು.

ಸರಕಾರದ ಆಶಯಗಳಿಗೆ ಅನುಗುಣವಾಗಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆತಂದುಅಭಿವೃದ್ಧಿಯಕಾಮಗಾರಿಗಳಲ್ಲಿ ಹೊಸ ಚೈತನ್ಯ ಮೂಡಿಸಲಾಗುವುದು. ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಿದರೆ ಉತ್ತಮ ಆಡಳಿತ ನೀಡಲು ಸಾಧ್ಯವಾಗುತ್ತದೆ. ಸಾರ್ವಜನಿಕರ, ಸಂತ್ರಸ್ತರ ಸಮಸ್ಯೆಗಳಿಗೆ ತ್ವರಿತ ಸ್ಪಂದನೆ ನೀಡುವುದರ ಜೊತೆಗೆ ಪದೇ ಪದೇ ಅಲೆದಾಡುವದನ್ನು ತಪ್ಪಿಸುವ ಕೆಲಸ ಮಾಡಲಾವುದೆಂದು ತಿಳಿಸಿದ ಅವರು ಜನರಿಗೆ ಗುಣಮಟ್ಟದ ಸೇವೆ ಒದಗಿಸುವುದು ನಮ್ಮ ಮುಖ್ಯ ಗುರಿಯಾಗಿದೆ ಎಂದರು.

ಬಿಟಿಡಿಎ ಆಡಳಿತವನ್ನು ಇನ್ನಷ್ಟು ಜನಸ್ನೇಹಿ, ಪಾರದರ್ಶಕಹಾಗೂಅಭಿವೃದ್ಧಿಮುಖಿಯಾಗಿ ರೂಪಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲಾಗುವುದು. ಸಂತ್ರಸ್ತರಿಗೆ ನಿವೇಶನಗಳ ಹಂಚಿಕೆ, ತಾಂತ್ರಿಕ ದೋಷಗಳು ಸೇರಿದಂತೆ ಒಟ್ಟಾರೆಯಾಗಿ ಸಂತ್ರಸ್ತರಿಗೆ ಅನುಕೂಲವಾಗುವ ರೀತಿಯಲ್ಲಿ ಎಲ್ಲ ರೀತಿಯ ಕೆಲಸ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲಾಗುತ್ತದೆ. ಯಾವ ಮಧ್ಯವರ್ತಿಗಳ ಹಸ್ತಕ್ಷೇಪ ಆಗದಂತೆ ನೋಡಿಕೊಳ್ಳಲಾಗುವುದು. ಈ ಕಾರ್ಯಕ್ಕೆ ಸಾರ್ವಜನಿಕರ, ಅಧಿಕಾರಿಗಳ ಸಹಕಾರ ಅಗತ್ಯವಾಗಿ ಬೇಕಾಗುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಶಾಸಕ ಉಮೇಶ ಮೇಟಿ, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಮುಖ್ಯ ಇಂಜಿನೀಯರ್ ಚಂದ್ರಹಾಸ ಬಂಡಿ, ಕಾರ್ಯನಿರ್ವಾಹಕ ಅಭಿಯಂತರ ವಾಯ್.ಬಿ.ಪಾತ್ರೋಟ, ಪುನರ್ವಸತಿ ಅಧಿಕಾರಿ ಪ್ರಶಾಂತ ಬಾರಿಗಿಡದ ಸೇರಿದಂತೆ ಇತರರು ಉಪಸ್ಥಿತರಿದ್ದರು.

> ನೇಕಾರ ಸಮಾಜದವರು ಇಂದು ಬಹಳ ಸಂಕಷ್ಟದಲ್ಲಿದ್ದಾರೆ. ಬಟ್ಟೆ ನೇಯ್ಗೆಯಿಂದ ಜೀವನ ನಡೆಸದೇ ಬೇರೆ ಉದ್ಯೋಗ ಮಾಡುತ್ತಿದ್ದಾರೆ. ನಾನು ಸಹ ಸಮಾಜದ ಕಷ್ಟಗಳನ್ನು ಅರಿತಿದ್ದೇನೆ. ನಾನು ನಿಮ್ಮ ಸಮಾಜದ ಪರವಾಗಿ ಕೆಲಸ ಮಾಡುತ್ತೇನೆ.
>
> • **ಪಿ.ಸಿ.ಗದ್ದಿಗೌಡರ** ಸಂಸದರು

ನೇಕಾರರ ಸಮಸ್ಯೆಗೆ ಸ್ಪಂದಿಸಲು ಪ್ರಯತ್ನ

ಅಖಿಲ ಭಾರತ ದೇವಾಂಗ ಜಾಗೃತಿ ಸಮಾವೇಶ, ಶ್ರೀಗಳ ಪಟ್ಟಾಭಿಷೇಕದಲ್ಲಿ ಶಾಸಕ ಚಿಮ್ಮನಕಟ್ಟಿ

• **ಕನ್ನಡಪ್ರಭ ವಾರ್ತೆ** ಬಾದಾಮಿ

ನೇಕಾರ ಅಭಿವೃದ್ಧಿ ನಿಗಮ ಸ್ಥಾಪನೆ, ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ನೇಕಾರ ಸಮಾಜದವರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂಬ ಬೇಡಿಕೆಯನ್ನು ನೇಕಾರ ಸಮಾಜದವರ ಪರವಾಗಿ ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗುವುದು. ಇದುವರೆಗೆ ನೇಕಾರ ಸಮಾಜಕ್ಕೆ ₹95 ಲಕ್ಷ ಅನುದಾನ ನೀಡಲಾಗಿದೆ ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು.

ಸಮೀಪದ ಬನಶಂಕರಿಯಲ್ಲಿ ಶುಕ್ರವಾರ ಅಖಿಲ ಭಾರತ ದೇವಾಂಗ (ನೇಕಾರ) ಜಾಗೃತಿ ಸಮಾವೇಶ-2026, ದಯಾನಂದ ಪುರಿ ಸ್ವಾಮೀಜಿಗಳ 36ನೇ ವರ್ಷದ ಪಟ್ಟಾಭಿಷೇಕ ಹಾಗೂ ತುಲಾಭಾರ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಈಗಾಗಲೇ ನೇಕಾರ ಸಮಾಜದ ವಿವಿಧ ಯೋಜನೆಗಳಿಗೆ ₹95 ಲಕ್ಷ ಅನುದಾನ ನೀಡಲಾಗಿದೆ. ಇನ್ನೂ ₹10 ಲಕ್ಷ ಅನುದಾನ ನೀಡಲಾಗುವುದು. ಸಮಾಜ ಬಾಂಧವರು ತಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ಸತ್ಪ್ರಜೆಗಳಾಗಿ ರೂಪಿಸಬೇಕು. ನೇಕಾರ ಸಮಾಜಕ್ಕೆ ನನ್ನ ಕೈಲಾದಷ್ಟು ಕೆಲಸ ಮಾಡುತ್ತೇನೆ. ನಿಮ್ಮ ಸಮಾಜದ ಯಾವುದೇ ಕೆಲಸಗಳಿದ್ದರೆ ತಿಳಿಸಿ, ನಾನು ಪ್ರಮಾಣಿಕವಾಗಿ ಕೆಲಸ ಮಾಡುತ್ತೇನೆ ಎಂದು ಹೇಳಿದರು.

ಅಖಿಲ ಭಾರತ ದೇವಾಂಗ (ನೇಕಾರ) ಜಾಗೃತಿ ಸಮಾವೇಶ ಸಮಿತಿಯ ಅಧ್ಯಕ್ಷ ರವೀಂದ್ರ ಕಲಬುರ್ಗಿ ಮಾತನಾಡಿ, ರಾಜ್ಯಸಭಾ ಸದಸ್ಯ ಕೆ.ನಾರಾಯಣ ಅವರು ನೇಕಾರ ಸಮಾಜದ ಯಾವುದೇ ಪಂಗಡಗಳಿದ್ದರೂ ಕನಿಷ್ಠ ₹20 ಲಕ್ಷ ಅನುದಾನ ನೀಡಿದ್ದಾರೆ. ಕೆ.ನಾರಾಯಣ, ಪ್ರೀತಿ ಕಾಮಕರ, ಉಮಾಶ್ರೀ ಹೊರತುಪಡಿಸಿದರೆ ನೇಕಾರಸಮಾಜರಾಜಕೀಯವಾಗಿಹಿಂದುಳಿದಿದೆ. ಸಮಾಜ ಜಾಗೃತರಾಗಬೇಕಿದೆ. ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯವಾಗಿ ಮುಂದುವರೆಯಬೇಕಾಗಿದೆ. ಇದಕ್ಕಾಗಿಸಮಾಜಸಂಘಟಿತರಾಗಬೇಕಿದೆ. ಕೈಮಗ್ಗ ನಿಗಮ, ಪವರಲೂಮ್ ನಿಗಮಕ್ಕೆ ನೇಕಾರರನ್ನೇ ಅಧ್ಯಕ್ಷರ ನ್ನಾಗಿ ಮಾಡಬೇಕು ಎಂದು ಮುಖ್ಯಮಂತ್ರಿಗಳ ಗಮನಕ್ಕೆ ತರಬೇಕು ಎಂದು ಶಾಸಕರಿಗೆ ಮನವಿ ಮಾಡಿದರು.



> ನಮ್ಮ ಸಮಾಜದವರು ಒಬ್ಬನೇ ಒಬ್ಬ ಐಎಎಸ್, ಕೆಎಎಸ್ ಅಧಿಕಾರಿಗಳು ಇಲ್ಲ, ರಾಜಕೀಯ ಪ್ರಾತಿನಿಧ್ಯ ಇಲ್ಲ, ಹೀಗಾದರೆ ಸಮ್ಮ ಸಮಾಜದ ಗತಿ ಏನು?. ಸಮಾಜ ಬಾಂಧವರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ಉತ್ತಮ ಅಧಿಕಾರಿಗಳನ್ನಾಗಿ ಮಾಡಲು ಪಣ ತೊಡಬೇಕು.
>
> • **ಕೆ.ನಾರಾಯಣ್** ರಾಜ್ಯಸಭಾ ಸದಸ್ಯ

ವಚನಕಾರ ದೇವರದಾಸಿಮಯ್ಯನವರ ಇಂಗ್ಲಿಷ್ ವಚನಗಳ ಕೃತಿ ಬಿಡುಗಡೆ ಮಾಡಿ ಮಾತನಾಡಿದ ಬೆಳಗಾವಿ ದಕ್ಷಿಣ ಶಾಸಕ ಅಭಯ ಪಾಟೀಲ ಮಾತನಾಡಿ, ನೇಕಾರ ಸಮಾಜದ ಯಾವುದೇ ಕೆಲಸಗಳಿದ್ದರೆ ರಾಜ್ಯ ಹಾಗೂ ಕೇಂದ್ರ ಸರಕಾರದಿಂದ ಮಾಡಿಕೊಡಲಾಗುವುದು. ಸಮಾಜದವರು ಸಂಘಟಿತರಾಗಿ, ಜಾಗೃತರಾಗಬೇಕು. ನಾವು ಪಕ್ಷಾತೀತವಾಗಿ ಕೆಲಸ ಮಾಡುತ್ತೇವೆ. ನೇಕಾರ ಸಮಾಜದವರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪನೆ ಮಾಡಿ. ನಾನು ಆರ್ಥಿಕ ಸಹಕಾರ ನೀಡುತ್ತೇನೆ ಎಂದು ಹೇಳಿದರು.

ಸಂಸದ ಪಿ.ಸಿ.ಗದ್ದಿಗೌಡರ ಮಾತನಾಡಿ, ನೇಕಾರ ಸಮಾಜದವರು ಇಂದು ಬಹಳ ಸಂಕಷ್ಟದಲ್ಲಿದ್ದಾರೆ. ಬಟ್ಟೆ ನೇಯ್ಗೆಯಿಂದ ಜೀವನ ನಡೆಸದೇ ಬೇರೆ ಉದ್ಯೋಗ ಮಾಡುತ್ತಿದ್ದಾರೆ. ನಾನು ಸಹ ಸಮಾಜದ ಕಷ್ಟಗಳನ್ನು ಅರಿತಿದ್ದೇನೆ. ನಾನು ನಿಮ್ಮ ಸಮಾಜದ ಪರವಾಗಿ ಕೆಲಸ ಮಾಡುತ್ತೇನೆ ಎಂದು ಹೇಳಿದರು.

ಹಂಪಿ ಹೇಮಕೂಟದ ದಯಾನಂದ ಪುರಿ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಅಶೀರ್ವಚನ ನೀಡಿದರು. ವೇದಿಕೆಯ ಮೇಲೆ ನೇಕಾರ ಸಮಾಜದ ಹಿರಿಯ ರಾದ ಬಿ.ಆರ್.ಗಿರಿಯಪ್ಪ, ಎಸ್.ಆರ್.ಸಿದ್ದಲಿಂಗ ನ್ನವರ, ಗೋವಿಂದಪ್ಪ, ಗಣೇಶ,ಎಂ.ಪಿ.ಉಮಾಶಂಕರ,ಬಿ.ಪಿ.ವಿನಾಯಕ ಕಾಮಕರ, ಬಿ.ಎಸ್.ಸೋಮಶೇಖರ, ಎಲ್ಲ ಜಿಲ್ಲೆಯ ಅಧ್ಯಕ್ಷರು, ಪದಾಧಿಕಾರಿಗಳು, ಮುಖಂಡರು ಹಾಜರಿದ್ದರು. ಸಂಕಣ್ಣ ಕರಡಿಗುಡ್ಡ ಸ್ವಾಗತಿಸಿದರು. ಟಿ.ರಾಜೇಶ ಪ್ರಾಸ್ತಾವಿಕವಾಗಿ ಮಾತನಾಡಿದರು.

ಇಂದು ಸಿಎಂ, ಡಿಸಿಎಂ ಭಾಗಿ

ಶನಿವಾರ ಬೆಳಗ್ಗೆ 10.30 ಗಂಟೆಗೆ ದಯಾನಂದ ಪುರಿ ಶ್ರೀಗಳು ತುಲಾಭಾರ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುವರು. ಆದಿಚುಂಚನಗಿರಿಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಸೇರಿದಂತೆ ಇತರೆ ಶ್ರೀಗಳು ಸಾನ್ನಿಧ್ಯ ವಹಿಸುವರು. ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಬನಶಂಕರಿ ಐಟಿಐ ಕಾಲೇಜು ಆವರಣದಲ್ಲಿ ಮತ್ತು ಬನಶಂಕರಿ ಶಾಖಾಮಠದ ಆವರಣದಲ್ಲಿ ಕಾನೂನು ಸಚಿವ ಎಚ್.ಕೆ.ಪಾಟೀಲ ಅತಿಥಿ ಗೃಹಗಳ ಶಂಕುಸ್ಥಾಪನೆ ನೆರವೇರಿಸುವರು. ಸಚಿವರಾದ ಸತೀಶ ಜಾರಕಿಹೊಳಿ ಮತ್ತು ಮಧು ಬಂಗಾರಪ್ಪ ಸ್ಮರಣ ಸಂಚಿಕೆ ಬಿಡುಗಡೆಗೊಳಿಸುವರು. ಸಕ್ಕರೆ ಸಚಿವ ಶಿವಾನಂದ ಪಾಟೀಲ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ಅವರು ವಸ್ತುಪ್ರದರ್ಶನ ಮಳಿಗೆಗಳನ್ನು ಉದ್ಘಾಟಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ, ಸಣ್ಣ ನೀರಾವರಿ ಸಚಿವ ಎನ್.ಎಸ್.ಭೋಸರಾಜು ದಾನಿಗಳಿಗೆ ಸನ್ಮಾನಿಸುವರು.



ಕಾಂಗ್ರೆಸ್ ತೆಕ್ಕೆಗೆ ಬರಲಿವೆ ಇನ್ನಷ್ಟು ಸಮಾಜಗಳು: ಎಂಬಿಪಾ

ವಿಜಯಪುರ: ಕಾಂಗ್ರೆಸ್ ಪಕ್ಷವೆಂಬುದು ಅನುಭವ ಮಂಟಪ. ಈ ಮಂಟಪದಲ್ಲಿ ಎಲ್ಲ ಜಾತಿ-ಜನಾಂಗಗಳಿಗೆ ಸಮಸ್ಥಾನ. ಆ ಸಾಮಾಜಿಕ ಹಿನ್ನೆಲೆಯನ್ನು ಅನುಸರಿಸಿ ಬಹಳಷ್ಟು ಹಿಂದುಳಿದ ಸಮಾಜಗಳು ಇಂದು ಕಾಂಗ್ರೆಸ್‌ಗೆ ಸೇರ್ಪಡೆಗೊಳ್ಳುತ್ತಿದ್ದಾರೆ. ಈ ಕಾರ್ಯ ಮುಂದುವರೆದಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇನ್ನಷ್ಟು ಸಮಾಜಗಳು ಕಾಂಗ್ರೆಸ್ ಪಕ್ಷದ ತೆಕ್ಕೆಗೆ ಬರಲಿವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿದರು.

ನಗರದ ಗೃಹ ಕಚೇರಿಯಲ್ಲಿ ತಿಕೋಟಾ ಪಟ್ಟಣದ ತಳವಾರ ಸಮುದಾಯದ ನಾನಾ ಮುಖಂಡರನ್ನು ಕಾಂಗ್ರೆಸ್ಸಿಗೆ ಬರಮಾಡಿಕೊಂಡು ಗುರುವಾರ ಮಾತನಾಡಿದ ಅವರು, ಮತಕ್ಷೇತ್ರದಲ್ಲಿ ಕೈಗೊಳ್ಳಲಾದ ಅಭಿವೃದ್ಧಿ ಯೋಜನೆಗಳು ಸಕಲ ಸಮುದಾಯಗಳ ಮೆಚ್ಚುಗೆಗೆ ಪಾತ್ರವಾಗಿದೆ. ತಿಕೋಟಾ ತಳವಾರ ಸಮುದಾಯದ ಪ್ರಮುಖ ಮುಖಂಡರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿರುವುದು ಇದಕ್ಕೆ ಸಾಕ್ಷಿಯಾಗಿದೆ ಎಂದರು.







CORRECTION OF NAME

I, **PANCHALINGAPPA I MASHAL,** of Mudhol, Tq; Mudhol, Dist; Bagalkote in Karnataka state. I am known by the below mentioned names and all the below description of names refer to me only. **1.Panchalingappa Mashal (in Aadhar Card N0. 9069 2229 2766) 2. Panchalingappa I Mashal (in Pan Card N0. CICPM2167E) 3. Panchalingappa Mashal (in Pan Card N0. CICPM2167E)** The said all names and refer to me alone. Vide affidavit dated; 29.04.2026 before Shri. D.H.Shorol, Advocate and Notary Government of Karnataka, Mudhol-587313, Tq; Mudhol, Dist: Bagalkote.

ನೈಋತ್ಯ ರೈಲ್ವೆ

ಇ-ಹರಾಜು ಕೆಟಲಾಗ್ ಸಂ. ಪಿಎನ್‌ಯು-ಟಾಯ್ಲೆಟ್-ಬಿಜಿಎಂ

ದಿನಾಂಕ : 04-05-2026

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಗುತ್ತಿಗೆಗಳ ಇ-ಹರಾಜಿಗಾಗಿ ಬಿಡ್ಡುದಾರರನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು : ಬೆಳಗಾವಿ ರೈಲ್ವೆ ನಿಲ್ದಾಣದಲ್ಲಿ ಮೂರು ವರ್ಷಗಳಿಗಾಗಿ ಪಾವತಿಸಿ ಮತ್ತು ಬಳಸಿ – ಸಾಮಾನ್ಯ ಶೌಚಾಲಯದ ಕಾರ್ಯಾಚರಣೆ ಮತ್ತು ನಿರ್ವಹಣೆ.

ಇ-ಹರಾಜಿನ ನಿಗದಿತ ಪ್ರಾರಂಭ :
19-05-2026 ರಂದು 11:00 ಗಂಟೆಗೆ

ವಿವರಗಳಿಗೆ www.ireps.gov.in (e-auction leasing module) ಗೆ ಲಾಗ್ ಆನ್ ಮಾಡಿ

ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು
ಪಿಯುಬಿ/98/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2026-27 ಹುಬ್ಬಳ್ಳಿ

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway-SWR SWRRLY @SWRAILWAYHQ @sw_railways



VISTAAR FINANCE

ವಿಸ್ತಾರ್ ಫೈನಾನ್ಷಿಯಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್

ನೋಂದಾಯಿತ ಕಛೇರಿ: ಪ್ಲಾಟ್ ಸಂ. 59 ಮತ್ತು 60-23, 22ನೇ ಕ್ರಾಸ್, 29ನೇ ಮೈನ್, ಬಿಟಿಎಂ ಬಡಾವಣೆ, 2ನೇ ಹಂತ, ಬೆಂಗಳೂರು- 560076.

ಶಾಖಾ ಕಛೇರಿ: 1ನೇ ಮಹಡಿ, ಸಂ.11-515-73, ವಾರ್ಡ್ ಸಂ.05, ಸಿದ್ಧಸಿರಿ ಸಹಕಾರಿ ಬ್ಯಾಂಕ್ ಮೇಲ್ಗಡೆ, ಅಂಚೆ ಕಚೇರಿ ಪಕ್ಕ, ಗಾಂಧಿ ಚೌಕ್ ರಸ್ತೆ, ಶೆಟ್ಟರ ಪೇಟೆ, ಇಳಕಲ್, ಪಿನ್-587125

ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟ ಸೂಚನೆ

2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆ ಜೊತೆಗೆ 2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 8 ಮತ್ತು 9ರಡಿ ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಸೂಚನೆ.

ಸಾಲಗಾರರಿಗೆ /ಸಹ-ಸಾಲಗಾರಿಗೆ/ ಅಡಮಾನದಾರ(ರಿಗೆ)ನಿಗೆ/ ಜಾಮೀನುದಾರ(ರಿಗೆ)ನಿಗೆ ನಿರ್ದಿಷ್ಟವಾಗಿ ಹಾಗೂ ಸಾರ್ವಜನಿಕರಿಗೆ ವಿಸ್ತಾರವಾಗಿ ಸೂಚನೆ ನೀಡುವುದೇನೆಂದರೆ ಕೆಳಕಂಡಂತೆ ವಿವರಿಸಲಾದ ಸ್ಥಿರ ಆಸ್ತಿಗಳನ್ನು ಸೆಕ್ಯೂರ್ಡ್ ಕ್ರೆಡಿಟರ್‌ಗೆ ಅಡಮಾನವಾಗಿಸಿದ್ದು, ಇವುಗಳ ಸ್ವಾಧೀನತೆಯನ್ನು ವಿಸ್ತಾರ್ ಫೈನಾನ್ಷಿಯಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಗಳು 2002ರ ಸರ್ಫೇಸಿ ಕಾಯಿದೆಯಡಿ ಮತ್ತು ಸದರಿ ಕಾಯಿದೆಯ ಕಲಂ 13(12) ರಡಿ ಓದಿಕೊಳ್ಳಬೇಕಾದ ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ನಿಮಯಗಳ 8 ಮತ್ತು 9ರಡಿ ಪ್ರದತ್ತವಾದ ಅಧಿಕಾರಗಳಂತೆ ಮತ್ತು ಸರ್ಫೇಸಿ ಕಾಯಿದೆ 2002ರ ಕಲಂ 13(2)ರಡಿ ಪಡೆದುಕೊಂಡಿರುತ್ತಾರೆ. ಭದ್ರತಾ ಆಸ್ತಿಗಳನ್ನು ''ಎಲ್ಲಿ ಹೇಗಿದೆಯೋ ಹಾಗೆಯೇ'', ಮತ್ತು ''ಎಲ್ಲಿ ಹೇಗಿದೆಯೋ ಉಳಿದಿದೆಯೋ ಹಾಗೆಯೇ'' ಮತ್ತು ''ಎಲ್ಲಿ ಏನು ಉಳಿದಿದೆಯೋ ಹಾಗೆಯೇ '' ಆಧಾರದಲ್ಲಿ 07.05.2026ರಂದು ಇ-ಹರಾಜಿನ ಮೂಲಕ ಮಾರಾಟ ಮಾಡಲಾಗುವುದು.

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ವೆಬ್‌ಸೈಟ್: **https://sarfaesi.auctiontiger.net**ರಲ್ಲಿ ಒದಗಿಸುವ ಇ-ಹರಾಜು ಪ್ಲಾಟ್‌ಫಾರಂ ಮೂಲಕ ನಾವು ಹರಾಜನ್ನು ನಡೆಸುತ್ತೇವೆ.

1. ಸಾಲಗಾರರ, ಸಹ- ಸಾಲಗಾರರ, ಅಡಮಾನದಾರರ ಹೆಸರು. 2. ಖಾತಾ ಸಂ.	ಆಸ್ತಿ/ಆಸ್ತಿಗಳ ವಿವರ	ಎ) ಡಿಮಾಂಡ್ ನೋಟೀಸಿನ ದಿನಾಂಕ, ಬಿ) ಸ್ವಾಧೀನತೆಯ ದಿನಾಂಕ ಸಿ) ಡಿಮಾಂಡ್ ನೋಟೀಸಿನಲ್ಲಿದ್ದಂತೆ ಬಾಕಿ ಮೊತ್ತ	1. ಇ-ಹರಾಜಿನ ದಿನಾಂಕ ಮತ್ತು ಸಮಯ
1.ಶ್ರೀ. ಯಮನಪ್ಪ ಕಲಾದಗಿ S/o ಮಾಯಪ್ಪ ....ಸಾಲಗಾರರು 2.ಶ್ರೀಮತಿ ಶಶಿಕಲಾ ಕಲಾದಗಿ W/o ಯಮನಪ್ಪ ಕಲಾದಗಿ....ಸಹ-ಸಾಲಗಾರ ಖಾತೆ ಸಂ. 0009SBML04229	ಸಕಲ ಸಮಸ್ತವೂ ಸೇರಿದ ಸ್ಥಿರಾಸ್ತಿಯ ವಿಪಿಸಿ. 582 ಮತ್ತು ಹೊಸ ಸಂ. 150100601300101441, ಮಳಲಿ, ಮುಧೋಳ್ ತಾಲೂಕು, ಬಾಗಲಕೋಟೆ ಜಿಲ್ಲೆ, ನೋಂದಣಿ ಜಿಲ್ಲೆ ಬಾಗಲಕೋಟೆ, ಉಪ ನೋಂದಣಿ ಮುಧೋಳ್, ಇಲ್ಲಿರುವ ಆಸ್ತಿಯ ಚಕ್ಕುಬಂದಿ: ಉತ್ತರದಿಂದ: ರಸ್ತೆ, ದಕ್ಷಿಣದಿಂದ: ನಿಂಗಪ್ಪ ಹ್ಯಾಗಡಿರವರ ಜಾಗ, ಪೂರ್ವಕ್ಕೆ : ರೇಣುಕಾ ಮರಾಠೆರವರ ಜಾಗ, ಪಶ್ಚಿಮದಿಂದ: ರಸ್ತೆ. ಸೈಟ್/ಭೂಮಿಯ ಒಟ್ಟು ಪ್ರದೇಶ (ವಿಸ್ತೀರ್ಣ) = 200 ಚ.ಮೀ.	ಎ) ಡಿಮಾಂಡ್ ನೋಟೀಸ್ ದಿನಾಂಕ: 27-07-2024 ಬಿ) ಸಾಂಕೇತಿಕ ಸ್ವಾಧೀನತೆ ದಿ: 20-01-2026 ಸಿ) ಡಿಮಾಂಡ್ ನೋಟೀಸ್‌ನಲ್ಲಿದ್ದಂತೆ ಬಾಕಿ ಇರುವ ಮೊತ್ತ : ರೂ. 20,16,762/-	ಇ-ಹರಾಜಿನ ದಿನಾಂಕ ಮತ್ತು ಸಮಯ 21/05/2026ರ ಬೆಳಗ್ಗೆ 11:30 ರಿಂದ ಮಧ್ಯಾಹ್ನ 12:30 ರವರೆಗೆ (ಜೊತೆಗೆ 5 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ)

1. ಎಲ್ಲಾ ಆಸಕ್ತಿಯುಳ್ಳ ಭಾಗವಹಿಸುವವರು/ ಬಿಡ್‌ದಾರರನ್ನು ಕೋರಿಕೊಳ್ಳುವುದೇನೆಂದರೆ ವೆಬ್‌ಸೈಟ್: **https://sarfaesi.auctiontiger.net & www.vistaarfinance.com**ಗೆ ಭೇಟಿ ನೀಡಬೇಕು. ವಿವರಗಳಿಗಾಗಿ, ಸಹಾಯಕ್ಕಾಗಿ ಅನುಸರಿಸಬೇಕಾದ ಕ್ರಮಗಳಿಗಾಗಿ ಮತ್ತು ಇ-ಹರಾಜಿನ ಆನ್‌ಲೈನಿನ ತರಬೇತಿಗಾಗಿ ನಿರೀಕ್ಷಿತ ಬಿಡ್‌ದಾರರು **ಮೆ|| ಇ-ಪ್ರೊಕ್ಯೂರ್‌ಮೆಂಟ್ ಟೆಕ್ನಾಲಜೀಸ್ ಲಿಮಿಟೆಡ್** ಅನ್ನು, ಸಂಪರ್ಕಿಸಬೇಕಾದವರು- **ಶ್ರೀ ರಾಮ್ ಶರ್ಮಾ, ಸಂಪರ್ಕ ಸಂಖ್ಯೆಗಳು- 8000023297/ 079-61813 6803.** ಇ-ಮೇಲ್ ಐಡಿ: **ramprasad@auctiontiger.net, support@auctiontiger.net.**
2. ಇ - ಹರಾಜಿನಲ್ಲಿ ಭಾಗವಹಿಸಬೇಕಾದ ಷರತ್ತು ಮತ್ತು ನಿಬಂಧನೆಗಳ ವಿರಗಳಿಗಾಗಿ ದಯವಿಟ್ಟು **https://sarfaesi.auctiontiger.net & www.vistaarfinance.com** ಗೆ ಭೇಟಿ ಕೊಡಿ.
3. ಋಣಬಾಧ್ಯತೆಗಳು- ಅಧಿಕೃತ ಅಧಿಕಾರಿಯ ಉತ್ತಮ ತಿಳುವಳಿಕೆಗೆ ಬಂದಂತೆ ಅಂತಹ ಮಾಹಿತಿಯೇನು ಇಲ್ಲ. ಬಿಡ್‌ದಾರರನ್ನು ಕೋರಿಕೊಳ್ಳುವುದೇನೆಂದರೆ ಈ ಬಗ್ಗೆ ಸ್ವಂತ ವಿಚಾರಣೆಯನ್ನು ಮಾಡಿಕೊಳ್ಳಲು ಕೋರಲಾಗಿದೆ.
4. ಇಎಂಡಿ ಪಾವತಿಯನ್ನು ವಿಸ್ತಾರ್ ಫೈನಾನ್ಷಿಯಲ್ ಸರ್ವೀಸಸ್ ಪ್ರವೇಟ್ ಲಿಮಿಟೆಡ್, ಖಾತಾ ಸಂ. 915030002126946, ಕ್ರೆಡಿಟ್‌ಗೆ ಆಕ್ಸಿಸ್ ಬ್ಯಾಂಕ್ ಲಿಮಿಟೆಡ್, ಐಎಫ್‌ಎಸ್‌ಸಿ ಕೋಡ್ **UTIB0001541**ಗೆ ಪಾವತಿಯಾಗಬೇಕು.
5. ಹೆಚ್ಚಿನ ವಿವರಗಳಿಗಾಗಿ ಹಾಗೂ ಸ್ಪಷ್ಟನೆಗಳಿಗಾಗಿ ಆಸ್ತಿ ಪರಿಶೀಲನೆಗಾಗಿ ದಯವಿಟ್ಟು ವಿಸ್ತಾರ್ ಫೈನಾನ್ಸಿಯಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್‌ನ ಸಂಬಂಧಿತ ಅಧಿಕಾರಿರವರನ್ನು ಸಂಪರ್ಕಿಸುವುದು.

ಸಾಲಗಾರ/ಸಹ-ಸಾಲಗಾರ ಅಡಮಾನದಾರ(ನಿಗೆ)ರಿಗೆ/ ಜಾಮೀನುದಾರ(ನಿಗೆ)ರಿಗೆ ಈ ನೋಟೀಸನ್ನು 2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 8(6)ಮತ್ತು 9(1)ರಡಿ ನೀಡಲಾದ 15 ದಿನಗಳ ನೋಟೀಸ್ ಎಂಬುದಾಗಿ ಪರಿಗಣಿಸಬೇಕು.

ದಿನಾಂಕ: 09/05/2026
ಸ್ಥಳ: ಕರ್ನಾಟಕ

ಸಹಿ/- ಅಧಿಕೃತ ಅಧಿಕಾರಿ
ವಿಸ್ತಾರ್ ಫೈನಾನ್ಸಿಯಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್

ಪ್ರತಿಯೊಬ್ಬ ಮಾನವನಿಗೆ ಸಂಸ್ಕಾರ ಅಗತ್ಯ ವಾಗಿದ್ದು, ನಿತ್ಯಾಕರ್ಮಾನುಷ್ಠಾನಕ್ಕೆ ಪ್ರಾರಂಭ ಹಂತವಾಗಿರುವ ಬ್ರಹ್ಮೋಪದೇಶ ಮೂಲಕ ಇಂದು ಶ್ರೀಮಠದಲ್ಲಿ ಸಾಮೂಹಿಕ ಸಂಸ್ಕಾರ ನೀಡಿರುವ ಕಾರ್ಯ ಇತರರಿಗೆ ಮಾದರಿಯಾಗಿದೆ.

• **ವೀರಭದ್ರ ಸ್ವಾಮೀಜಿ** ಕಂದಿಮಲ್ಲೆಯ ಪಲ್ಲೆ ಬ್ರಂಗಂಗಾರಿ ಮಠ

ಹುನಗುಂದ ಪುರಸಭೆಗೆ ಲೋಕಾಯುಕ್ತ ತಂಡ ಭೇಟಿ

• **ಕನ್ನಡಪ್ರಭ ವಾರ್ತೆ** ಹುನಗುಂದ

ಬೆಂಗಳೂರು-ಬಾಗಲಕೋಟೆ ಲೋಕಾಯುಕ್ತ ಕಚೇರಿಗೆ ಸಾರ್ವಜನಿಕರಿಂದ ಬಂದ ದೂರುಗಳ ಆಧಾರದ ಮೇಲೆ ಹುನಗುಂದ ಪುರಸಭೆಗೆ ಲೋಕಾಯುಕ್ತ ತಂಡ ಭೇಟಿ ನೀಡಿ ಕಚೇರಿಯ ಎಲ್ಲ ವಿಭಾಗಗಳ ಕಡತಗಳನ್ನು ಪರಿಶೀಲನೆ ಗುರವಾರ ನಡೆಸಿತು.



ಇ-ಸ್ವತ್ತು, ಎನ್‌ಓಸಿ ಮತ್ತು ಕಟ್ಟಡ ಕಟ್ಟಲು ಅನುಮತಿ, ಖಾತೆ ಬದಲಾವಣೆ, ಕಂಪ್ಯೂಟರ್ ಉತಾರ ನೀಡುವುದರಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ಲಂಚ ಬೇಡಿಕೆ ಇಡುತ್ತಿದ್ದಾರೆಂಬ ಹಾಗೂ ಸಾರ್ವಜನಿಕರಿಗೆ ಕೆಲಸ ಮಾಡಲು ವಿಳಂಬ ಮಾಡಿ ತೊಂದರೆ ಮಾಡುತ್ತಿದ್ದಾರೆಂಬ ದೂರಿನ ಹಿನ್ನೆಲೆಯಲ್ಲಿ ಭೇಟಿ ನೀಡಿ ಪರಿಶೀಲಿಸಿದರು. ಸಾರ್ವಜನಿಕರ ಕೆಲಸ ಕಾರ್ಯಗಳು ತ್ವರಿತವಾಗಿ ಮತ್ತು ಪಾರದರ್ಶಕವಾಗಿ ನಡೆಯಬೇಕು ಎಂದು ಲೋಕಾಯುಕ್ತ ಅಧಿಕಾರಿಗಳು ಪಿಡಿಒಗೆ ತಾಕೀತು ಮಾಡಿದರು. ಸಾರ್ವಜನಿಕರ ಅವಾಲು ಸ್ಥಳದಲ್ಲಿಯೇ ಸ್ವೀಕರಿಸಿ ನಾಲ್ಕು ಜನರಿಗೆ ಉತಾರ ಕೊಡಿಸಿ ಸಮಸ್ಯೆಗಳನ್ನು ಇತ್ಯರ್ಥಗೊಳಿಸಿದರು. ಈ ದಿಢೀರ್‌ಭೇಟಿ ಪುರಸಭೆ ಹಾಗೂ ತಾಲೂಕು ಕಚೇರಿ ವಲಯದಲ್ಲಿ ಸಂಚಲನ ಮೂಡಿಸಿತ್ತು. ಡಿವೈಎಸ್ಪಿ ಸುರೇಶ ರೆಡ್ಡಿ, ಇನ್ ಪೆಕ್ಟರ್ ಬೀಮನಗೌಡ ಬಿರಾದರ, ಮಲ್ಲಿಕಾರ್ಜುನ ಬಿರಾದರ, ಎನ್.ಎ. ಕಿಲ್ಲಾರಿ, ಇತರರು ಇದ್ದರು.

ಸಾಕು ನಾಯಿ ಸಾವು: ವೃದ್ಧ ದಂಪತಿ ಮೇಲೆ ಹಲ್ಲೆ

ಬೆಳಗಾವಿ: ಸಾಕು ನಾಯಿಯ ಸಾವಿನ ವಿಚಾರಕ್ಕೆ ಸಂಬಂಧಿಸಿ ವೃದ್ಧ ದಂಪತಿ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ ಘಟನೆ ಬೆಳಗಾವಿ ನಗರದ ಕಲ್ಮೇಶ್ವರ ನಗರದಲ್ಲಿ ನಡೆದಿದೆ. ಘಟನೆಯಲ್ಲಿ ಗಾಯಗೊಂಡ ದಂಪತಿ ಗುರುವಾರ ಸಂಜೆ ನ್ಯಾಯಕ್ಕಾಗಿ ನಗರ ಪೊಲೀಸ್ ಆಯುಕ್ತರ ಕಚೇರಿ ಮೆಟ್ಟಿಲೇರಿದ್ದಾರೆ.ಶಾಂತಾ ರಜಾಯಿ ಹಾಗೂ ಭೈರು ರಜಾಯಿ ಎಂಬ ವೃದ್ಧ ದಂಪತಿ ಮೇಲೆ ನೆರೆಯ ನಿವಾಸಿಗಳಾದ ಸುಗಂಧ ಲಾಡ್ ಹಾಗೂ ಅವರ ಪುತ್ರ ನಂದುಲಾಡ್‌ಹಲ್ಲೆನಡೆಸಿದ್ದಾರೆಎಂದುಆರೋಪಿಸಲಾಗಿದೆ. ಸಾಕು ನಾಯಿ ಸಾವನ್ನಪ್ಪಿದ ಹಿನ್ನೆಲೆಯಲ್ಲಿ ನಾಯಿಯನ್ನು ನೀವೇ ಕೊಂದಿದ್ದೀರಾ ಎಂದು ಆರೋಪಿಸಿ ತಾಯಿ-ಮಗ ಇಬ್ಬರು ಏಕಾಏಕಿ ವೃದ್ಧ ದಂಪತಿ ಮನೆಗೆ ಬಂದು ಜಗಳ ತೆಗೆದು ಬಳಿಕ ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ. ಹಲ್ಲೆಯ ವೇಳೆ ಶಾಂತಾ ರಜಾಯಿ ಅವರ ಕೈಗೆ ತೀವ್ರ ಗಾಯವಾಗಿದ್ದು, ಕೈ ಮುರಿದಿದೆ. ಇದೇ ವೇಳೆ ಭೈರು ರಜಾಯಿ ಅವರ ತಲೆಗೆ ಗಂಭೀರ ಪೆಟ್ಟು ಬಿದ್ದಿದ್ದು, ರಕ್ತಸ್ರಾವವಾದ ಹಿನ್ನೆಲೆ ಸ್ಥಳೀಯರು ಹಾಗೂ ಕುಟುಂಬಸ್ಥರು ತಕ್ಷಣ ಅವರನ್ನು ಬೆಳಗಾವಿಯ ಬಿಮ್ಸ್ ಆಸ್ಪತ್ರೆಗೆ ದಾಖಲಿಸಿದ್ದಾರೆ. ಆಸ್ಪತ್ರೆಯಲ್ಲಿ ಇಬ್ಬರಿಗೂ ಚಿಕಿತ್ಸೆ ಮುಂದುವರಿದಿದೆ. ಘಟನೆ ಕುರಿತು ಮಾತನಾಡಿದ ವೃದ್ಧ ದಂಪತಿ, ನಾಯಿ ಸಾವಿಗೂ ನಮಗೂ ಯಾವುದೇ ಸಂಬಂಧ ಇಲ್ಲ. ಅನಾವಶ್ಯಕ ಆರೋಪ ಮಾಡಿ ನಮ್ಮ ಮೇಲೆ ಹಲ್ಲೆ ನಡೆಸಲಾಗಿದೆ ಎಂದು ಆರೋಪಿಸಿದ್ದಾರೆ. ಈ ಕುರಿತು ಎಪಿಎಂಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಳೇರಾಜೇಂದ್ರಸ್ವಾಮಿ ಮಠ ರೈತರ ಬಾಳಿನ ಸಂಜೀವಿನಿ

ಹೊಸ ಮುರನಾಳದಲ್ಲಿ ಸಾಮೂಹಿಕ ಉಪನಯನ, ಧಾರ್ಮಿಕ ಸಭೆಯಲ್ಲಿ ವೀರಭದ್ರ ಸ್ವಾಮೀಜಿ

• **ಕನ್ನಡಪ್ರಭ ವಾರ್ತೆ** ಬಾಗಲಕೋಟೆ

ಕೃಷಿ ಪರಂಪರೆಗೆ ಆಶ್ರಯದಾತವಾದ ಮಳೆ ಪರಂಪರೆ ಮಠ ರೈತರ ಬಾಳಿನ ಸಂಜೀವಿನಿಯಾಗಿದ್ದು, ಬಾಲ್ಯದಿಂದ ಸಂಸ್ಕಾರ ನೀಡುವ ಈ ಸಾಮೂಹಿಕ ಉಪನಯನ ಶ್ಲಾಘನಿಯವಾಗಿದೆ ಎಂದು ಆಂಧ್ರಪ್ರದೇಶದ ಕಂದಿಮಲ್ಲೆಯ ಪಲ್ಲೆ ಬ್ರಂಗಂಗಾರಿ ಮಠದ ಜಗದ್ಗುರು ಮದ್ವಿರಾಠ ಪೋತಲ್ಲೂರು ವೀರಬ್ರಹ್ಮೇಂದ್ರಸ್ವಾಮಿಗಳ 8ನೇ ವಂಶಸ್ಥರಾದ ವೀರಭದ್ರ ಸ್ವಾಮಿಗಳು ಹೇಳಿದರು.

ಸಮೀಪದ ಮುರನಾಳ ಪುನರ್ವಸತಿ ಕೇಂದ್ರದಲ್ಲಿ ಮಳೆರಾಜೇಂದ್ರಸ್ವಾಮಿ ಮಠದ ಗುರುನಾಥ ಮಹಾ ಸ್ವಾಮಿಗಳ ಸಂಕಲ್ಪದಂತೆ ಶುಕ್ರವಾರ ಸಾಮೂಹಿಕ ಉಪನಯನ ಹಾಗೂ ಧಾರ್ಮಿಕ ಸಭೆಯ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಪ್ರತಿಯೊಬ್ಬ ಮಾನವನಿಗೆ ಸಂಸ್ಕಾರ ಅಗತ್ಯ ವಾಗಿದ್ದು, ನಿತ್ಯಾಕರ್ಮಾನುಷ್ಠಾನಕ್ಕೆ ಪ್ರಾರಂಭ ಹಂತವಾಗಿರುವ ಬ್ರಹ್ಮೋಪದೇಶ ಮೂಲಕ ಇಂದು ಶ್ರೀಮಠದಲ್ಲಿ ಸಾಮೂಹಿಕ ಸಂಸ್ಕಾರ ನೀಡಿರುವ ಕಾರ್ಯ ಇತರರಿಗೆ ಮಾದರಿಯಾಗಿದೆ. ಮೊದಲ ನಿಂದಲೂ ಶ್ರೀ ಮಳೆರಾಜೇಂದ್ರಸ್ವಾಮಿ ಮಠ ಈ ಭಾಗದ ಕೃಷಿಕ ಸಮಾಜದ ಮಠವೆಂದೇ ಖ್ಯಾತಿ ಪಡೆದಿದೆ, ಭೂಮಿಯ ಒಡಲ ತಣಿಸುವನೇ ಮಳೆರಾಯ ಅಂತಹ ಮಳೆ ಪರಂಪರೆಯ ಮಠ ಈ ರೈತರ ಬಾಳಿಗೆ ಸಂಜೀವಿನಿಯಾಗಿದೆ ಎಂದರು.

ಸಾನ್ನಿಧ್ಯ ವಹಿಸಿದ್ದ ನಿತ್ಯಾನಂದ ಸ್ವಾಮೀಜಿ ಹಾಗೂ ಜಗನ್ನಾಥ ಸ್ವಾಮೀಜಿ ಮಾತನಾಡಿ, ಭಕ್ತರಿಗೆ ಆಸರೆಯಾಗಿ ನಿಲ್ಲುವ ಸದಾಶಯದಿಂದ ಶ್ರೀಮಠದಲ್ಲಿ ಸಾಮೂಹಿಕ ಉಪನಯನ, ಸಾಮೂಹಿಕ ವಿವಾಹ ಹಮ್ಮಿಕೊಳ್ಳುತ್ತಿದೆ, ಮನುಷ್ಯನ ಬದುಕು ಪೂರ್ಣ ಗೊಳ್ಳಲು ನಿತ್ಯಕರ್ಮಾನುಷ್ಠಾನ ಅಗತ್ಯ, ಸಂಸ್ಕಾರಗಳು ಬದುಕನ್ನು ಹಸನಗೊಳಿಸುತ್ತವೆ ಎಂದರು.

ಸಾನ್ನಿಧ್ಯ ವಹಿಸಿದ್ದಶ್ರೀಮಠದ ಹಿರಿಯ ಪೂಜ್ಯರಾದ ಮಳೆಯಪ್ಪಯ್ಯ ಮಹಾಸ್ವಾಮಿಗಳು ಮಾತನಾಡಿ, ಶ್ರೀ ಗುರುನಾಥ ಮಹಾಸ್ವಾಮಿಗಳು ತಮ್ಮ ಸಂಕಲ್ಪದಂತೆ ಸಾಮೂಹಿಕ ಉಪನಯನ ಹಾಗೂ ಧರ್ಮ ಸಭೆಯನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಸಾಮಾಜಿಕ, ಶೈಕ್ಷಣಿಕ, ಮತ್ತು ಆರ್ಥಿಕವಾಗಿ ಭಕ್ತಾಧಿಗಳ ಸರ್ವತೋಮುಖ ಅಭಿವೃದ್ಧಿಗೆ ಮಠಗಳು ಶ್ರಮಿಸಬೇಕಿದೆ, ಜನ ಕೃಷಿಯತ್ತ ಒಲವು ಹೆಚ್ಚಾಗಲಿ, ಮಕ್ಕಳನ್ನು ದೇಶದ ಉತ್ತಮ ಪ್ರಜೆಯನ್ನಾಗಿಸುವಲ್ಲಿ ಸಂಸ್ಕಾರಗಳು ಅಗತ್ಯವಾಗಿವೆ ಎಂದರು.



ಮುರನಾಳ ಪುನರ್ವಸತಿ ಕೇಂದ್ರದಲ್ಲಿ ಮಳೆರಾಜೇಂದ್ರಸ್ವಾಮಿ ಮಠದಲ್ಲಿ ಸಾಮೂಹಿಕ ಉಪನಯನ ಸಮಾರಂಭ ನಡೆಯಿತು. ವೀರಭದ್ರಸ್ವಾಮೀಜಿ, ನಿತ್ಯಾನಂದ ಸ್ವಾಮೀಜಿ, ಜಗನ್ನಾಥ ಸ್ವಾಮೀಜಿ,ಗುರುನಾಥ ಸ್ವಾಮೀಜಿ ಇದ್ದರು.

ಶಿಮಳೆರಾಜೇಂದ್ರ ಸ್ವಾಮಿ ಮಠದ ಗುರುನಾಥ ಮಹಾಸ್ವಾಮಿಗಳವರು ಪ್ರಾಸ್ತಾವಿಕವಾಗಿ ಮಾತನಾಡಿ, ಸಂಸ್ಕೃತಿ, ಸಂಪ್ರದಾಯ, ಪರಂಪರೆ ಸಂಸ್ಕಾರಗಳು ಮಾನವನ ವ್ಯಕ್ತಿತ್ವವನ್ನು ಉನ್ನತೀಕರಿಸುತ್ತವೆ. ನಮ್ಮ ಭಕ್ತರ ಸಹಾಯ ಸಹಕಾ ರದಿಂದ ಮಳೆರಾಜೇಂದ್ರ ಸ್ವಾಮಿಗಳ ಮಠದಿಂದ ಸಾಂಸ್ಕೃತಿಕ, ಧಾರ್ಮಿಕ ಕಾರ್ಯಕ್ರಮ ಮಾಡಲು ಸಾಧ್ಯವಾಗಿದೆ. ಆ ನಿಟ್ಟಿನಲ್ಲಿ ಇಂದು ನಮ್ಮ ಶ್ರೀ ಮಠದಲ್ಲಿ ನಾವು 30ಕ್ಕೂ ಹೆಚ್ಚು ವಟುಗಳಿಗೆಸಾಮೂಹಿಕ ಉಪನಯನ ಮಾಡಿರುವುದು ಸಂತೃಪ್ತಿ ತಂದಿದೆ ಎಂದರು,

ವೇದಿಕೆ ಮೇಲೆ ನವಲಗುಂದ ನಾಗಲಿಂಗಸ್ವಾಮಿ ಮಠದ ಪೂಜ್ಯರಾದ ವೀರಯ್ಯಸ್ವಾಮಿಗಳು, ಸಿಂದಗಿ ಮೂರುಝಾವ ಮಠದ ರಾಮಚಂದ್ರಸ್ವಾಮಿಗಳು, ಶಿರೋಳ-ಬೈರನಹಟ್ಟಿ ವೀರಕ್ತಮಠದ ಶಾಂತಲಿಂಗ ಸ್ವಾಮಿಗಳು, ಹೊಳೆ ಆಲೂರಿನ ಯಚ್ಚರಸ್ವಾಮಿ ಮಠದ ಯಚ್ಚರಸ್ವಾಮಿಗಳು, ಗಂಗಾಧರಸ್ವಾಮಿಗಳು, ಮುರನಾಳ ಮಠದ ಜಗನ್ನಾಥ ಸ್ವಾಮಿಗಳು, ಮೌನೇಶ್ವರ ಸ್ವಾಮಿಗಳು, ಚಿದಾನಂದ ಸ್ವಾಮಿಗಳು, ಸಚಿನ ಸ್ವಾಮಿಗಳು, ಮೇಘರಾಜ ಸ್ವಾಮಿಗಳು, ಗುರುನಾಥ ಸ್ವಾಮಿಗಳು, ಶಿವಾನಂದ ಸ್ವಾಮಿಗಳು, ಹಾಗೂ ಅಶೋಕ ಗುರುಬಾಳಪ್ಪ ಪತ್ತಾರ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಉಪ್ಪಾರಹೊಸಳ್ಳಿಯ ಕರಸ್ಥಲ ನಾಗಲಿಂಗ ಸ್ವಾಮಿಮಠದ ಸುರೇಂದ್ರ ಸ್ವಾಮೀಜಿ ಬ್ರಹ್ಮ ಪೌರೋಹಿತ್ಯದಲ್ಲಿ 30 ವಟುಗಳಿಗೆ ಉಪನ ಯನದ ಮೂಲಕ ಶಾಸ್ತ್ರೋಕ್ತವಾಗಿ ಬ್ರಹ್ಮೋಪದೇಶ ನೀಡ ಲಾಯಿತು. ನಂತರ ನಡೆದ ಧಾರ್ಮಿಕ ಸಭೆಯಲ್ಲಿ ಶ್ರೀಗಳಿಗೆ ಧಾನಿಗಳಿಗೆ ಸೇವೆಗೈದ ಭಕ್ತಾಧಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು, ಸಾವಿರಾರು ಭಕ್ತರು ಅನ್ನ ಸಂತರ್ಪಣೆಯಲ್ಲಿ ಪಾಲ್ಗೊಂಡರು. ಉಪನ್ಯಾಸಕರಾದ ಡಾ. ಚಂದ್ರಶೇಖರ ಕಾಳನ್ನವರ ನಿರೂಪಿಸಿದರು, ಸಂಗಮೇಶ ಬಡಿಗೇರ ವಂದಿಸಿದರು. ಗ್ರಾಮದ ಗುರು ಹಿರಿಯರು, ಸುತ್ತಮುತ್ತಲಿನ ಗ್ರಾಮಸ್ಥರು ಭಕ್ತಾಧಿಗಳು ಭಾಗವಹಿಸಿದ್ದರು.

ಹೃದಯಾಘಾತ: ಸಿಆರ್‌ಪಿಎಫ್ ಯೋಧ ಸಾವು

ಚಡಚಣ: ತಮಿಳುನಾಡಿನ ಚುನಾವಣೆ ಕಾರ್ಯ ಮುಗಿಸಿ ರಜೆಗಾಗಿ ಸ್ವಗ್ರಾಮಕ್ಕೆ ಆಗಮಿಸಿದ್ದ ಸಿಆರ್‌ಪಿಎಫ್ ಯೋಧ ತಮ್ಮ ತೋಟದಲ್ಲಿ ಕೆಲಸ ಮಾಡುವಾಗ ಹೃದಯಾಘಾತವಾಗಿದ್ದು, ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟ ಘಟನೆ ಇಂಡಿ ತಾಲೂಕಿನ ಹೊರ್ತಿ ಗ್ರಾಮದಲ್ಲಿ ಸೋಮವಾರ ನಡೆದಿದೆ. ಹೊರ್ತಿ ಗ್ರಾಮದ ಸಿಆರ್‌ಪಿಎಫ್ ಯೋಧ ರೇವಣಸಿದ್ಧ ಅಶೋಕ ಪೂಜಾರಿ (30) ಮೃತ ಯೋಧ. ಮೃತ ಸಿಆರ್‌ಪಿಎಫ್ ಯೋಧನಿಗೆ ಪತ್ನಿ ಪವಿತ್ರಾ, 1 ವರ್ಷದ ಓರ್ವ ಪುತ್ರಿ ಆದಿತಿ ಸೇರಿದಂತೆ ಅಪಾರ ಬಂಧು-ಬಳಗವಿದೆ. ಈ ಕುರಿತು ಹೊರ್ತಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ. ಆಂಧ್ರಪ್ರದೇಶದ ವಿಶಾಖ ಪಟ್ಟಣದಲ್ಲಿ ಸಿಆರ್‌ಪಿಎಫ್‌ದಲ್ಲಿ ಸೇವೆ ಸಲ್ಲಿಸುತ್ತಿರುವ ಸಿಆರ್‌ಪಿಎಫ್ ಯೋಧ ರೇವಣಸಿದ್ಧ ಪೂಜಾರಿ ಅವರು ಏಪ್ರಿಲ್ ತಿಂಗಳ ತಮಿಳುನಾಡಿನ ಚುನಾವಣೆ ಕಾರ್ಯ ನಿಮಿತ್ತ ಚೆನ್ನೈನಲ್ಲಿ ಕಾರ್ಯನಿರ್ವಹಿಸಿದ ನಂತರ ಏ.25 ರಂದು ಸ್ವಗ್ರಾಹಮಕ್ಕೆ ಪುತ್ರಿಯ ಜವಳ ಕಾರ್ಯಕ್ರಮದ ಹಿನ್ನೆಲೆಯಲ್ಲಿ ರಜೆ ತೆಗೆದುಕೊಂಡು ಬಂದಿದ್ದರು. ಕೋಳೂರಗಿ ಗ್ರಾಮದ ರಸ್ತೆಗೆ ಹೊಂದಿಕೊಂಡಿರುವ ಸ್ವಂತ ತೋಟದ ವಸ್ತಿಯಲ್ಲಿ ಸೋಮವಾರ ರಾತ್ರಿ 9 ಗಂಟೆ ಸುಮಾರಿಗೆ ತೋಟದಲ್ಲಿ ಕೆಲಸದಲ್ಲಿದ್ದಾಗ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ.ಅಂತ್ಯಕ್ರಿಯೆಯು ಹೊರ್ತಿ ಗ್ರಾಮದ ಕೊಳೂರಗಿ ಗ್ರಾಮದ ರಸ್ತೆಯಲ್ಲಿರುವ ತೋಟದ ವಸ್ತಿಯಲ್ಲಿ ಮಂಗಳವಾರ ಸಂಜೆ 6.30 ಗಂಟೆಗೆ ನಡೆದ ಅಂತ್ಯಕ್ರಿಯೆಯಲ್ಲಿ ಬೆಳಗಾವಿಯ ಅಸಿಸ್ಟೆಂಡ್ ಕಮಾಡೆಂಟ್ ಶ್ರವಣ ಮೀನಾ ಹಾಗೂ 10 ಜನ ಹೆಡ್ ಮತ್ತು ಸಿಟಿ ಕಾನಸ್ಟೆಬಲ್‌ರು ಆಗಮಿಸಿ ಸರ್ಕಾರಿ ಗೌರವ ವಂದನೆ ಸಲ್ಲಿಸಿದರು.

ತಿಕೋಟಾದಲ್ಲಿಗ ಕ್ಯಾಲಿಫೋರ್ನಿಯಾದ ದ್ರಾಕ್ಷಿ

ವಿಜಯಪುರದಲ್ಲಿ ಔರಾ-36 ದ್ರಾಕ್ಷಿ ಫುಲ್ ಹವಾ | ಹೆಚ್ಚಿನ ರಾಸಾಯನಿಕ ಬಳಸದೆಯೇ ಅಧಿಕ ಇಳುವರಿ

• **ಶಶಿಕಾಂತ ಮೆಂಡೆಗಾರ**
ಕನ್ನಡಪ್ರಭ ವಾರ್ತೆ ವಿಜಯಪುರ

ಈ ಭೂಮಿಗೆ ನೀವು ಬೊಗಸೆ ನೀರು ಕೊಟ್ಟರೆ ಸಾಕು, ಇದು ಅಮೆರಿಕದ ಕ್ಯಾಲಿಫೋರ್ನಿಯಾವನ್ನೇ ಮೀರಿಸುತ್ತದೆ ಎಂದು ನಡೆದಾಡುವ ದೇವರು, ಶತಮಾನದ ಸಂತ ಸಿದ್ದೇಶ್ವರ ಸ್ವಾಮೀಜಿಗಳು ಹೇಳಿದ್ದ ಮಾತು ಇನ್ನೂ ಎಲ್ಲರ ಕಿವಿಯಲ್ಲಿ ಗುನುಗುತ್ತಿದೆ. ಶ್ರೀಗಳು ಹೇಳಿದ್ದ ಮಾತನ್ನು ಗಂಭೀರವಾಗಿ ಪರಿಗಣಿಸಿದ ಸಚಿವ ಎಂ.ಬಿ.ಪಾಟೀಲರು ಆ ಕಾಯಕಕ್ಕೆ ನೀರೆರೆದರು. ಈ ಹಿನ್ನೆಲೆ ಇದೀಗ ಕ್ಯಾಲಿಫೋರ್ನಿಯಾದಲ್ಲಿ ಬೆಳೆಯುವ ಬಹುಪ್ರಸಿದ್ಧ ಓರಾ-36 ತಳಿಯ ದ್ರಾಕ್ಷಿಯನ್ನೇ ವಿಜಯಪುರ ಜಿಲ್ಲೆಯಲ್ಲಿ ಬೆಳೆದು ರೈತರುಸೈ ಎನಿಸಿಕೊಂಡಿದ್ದಾರೆ. ಕ್ಯಾಲಿಫೋರ್ನಿಯಾದ ಔರಾ-36 ತಳಿಯ ಕಂದು ಬಣ್ಣದ ದ್ರಾಕ್ಷಿ ರೈತರನ್ನು ಇಲ್ಲಿ ಹೆಚ್ಚು ಗಮನ ಸೆಳೆಯುತ್ತಿದೆ.

ಏನಿದು ಔರಾ-36 ದ್ರಾಕ್ಷಿ?: ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಅತಿಹೆಚ್ಚು ಬೆಳೆಯಲಾಗುವ ಈ ಔರಾ-36 ದ್ರಾಕ್ಷಿ ನೋಡಲು ಕಂದು ಬಣ್ಣದ್ದಾಗಿದೆ. ಹೆಚ್ಚು ರಾಸಾಯನಿಕ ಬಳಸದೆಯೇ ಅಧಿಕ ಇಳುವರಿ ಕೊಡುತ್ತದೆ. ನೋಡಲು ಆಕರ್ಷಕವಾಗಿರುವ ಈ ದ್ರಾಕ್ಷಿ ತಿನ್ನಲು ಸಹ ಅಷ್ಟೇ ರುಚಿಕರ. ಇದು ಕ್ಯಾಲಿಫೋರ್ನಿಯಾದ ಗ್ರಾಫಾ ಗ್ಲೋಬಲ್ ಕಂಪನಿಯ ಪೇಟೆಂಟ್‌ನ ವೆರೈಟಿಯಾಗಿದ್ದು, ಇದನ್ನು ನಾಸಿಕನ ಸಹ್ಯಾದ್ರಿ ಫಾರ್ಮ್ಸ್ (ಎಫ್‌ಪಿಒ) ನವರು ವಿಸ್ತರಣೆ ಮಾಡಲು ಅನುಮತಿ ಪಡೆದಿದ್ದಾರೆ. ಅಲ್ಲಿಂದ ತಿಕೋಟಾಗೆ ಕಾಲಿಟ್ಟಿರುವ ಈ ದ್ರಾಕ್ಷಿ ಇದೀಗ ಜಿಲ್ಲೆಯಲ್ಲಿ ತನ್ನದೆಯಾದ ಬೇಡಿಕೆ ಹೊಂದಿದೆ.

ಇದು ರಾಸಾಯನಿಕವೋ ಅಥವಾ ಸಾವಯವವೋ?: ಮಹಾರಾಷ್ಟ್ರದ ನಾಸಿಕನ ಸಹ್ಯಾದ್ರಿ ಫಾರ್ಮ್ಸ್‌ನ ವಿಲಾಸರಾವ್ ಶಿಂಧೆ ಅವರ ಸಹಯೋಗದಲ್ಲಿ ಕ್ಯಾಲಿಫೋರ್ನಿಯಾದಲ್ಲಿ ಬೆಳೆಯುವ ಉತ್ಕೃಷ್ಟ ದರ್ಜೆಯ ಔರಾ-36 ತಳಿಯ ದ್ರಾಕ್ಷಿಯನ್ನು ತಿಕೋಟಾದ ಕೃಷ್ಣವೇಣಿ ಎಫ್.ಬಿ.ಒ (ಫಾರ್ಮರ್ಸ್ ಪ್ರೊಡ್ಯೂಜರ್ಸ್ ಆರ್ಗಾನೈಜೇಶನ್) ಇಲ್ಲಿ ಪರಿಚಯಿಸಿದೆ. ಈ ಮೊದಲು ಇಲ್ಲಿ ಬೆಳೆಯಲಾಗುತ್ತಿದ್ದ ಮಾಣಿಕ ಚಮನ್, ಥಾಮ್ಸನ್ ಸೀಡ್‌ಲೆಸ್, ಸೋನಾಕಾ ಈ ದ್ರಾಕ್ಷಿ ತಳಿಗಳಿಗೆ ಹೂ ಬಿಡುವ ಸಮಯದಲ್ಲಿ, ಕಾಯಿ ಗೊಂಚಲು ಹಿಡಿಯುವಾಗ, ದ್ರಾಕ್ಷಿ ವಿಸ್ತೀರ್ಣ ಹಾಗೂ ಬಣ್ಣ ಬರಲೆಂದು ಹಲವು ರಾಸಾಯನಿಕಗಳನ್ನು ಬಳಸಬೇಕಾದ ಅನಿವಾರ್ಯತೆ ಇತ್ತು. ಆದರೆ, ಈ ಔರಾ-36 ತಳಿಗೆ ಇದ್ಯಾವುದರ ಗೊಡವೆಯೇ ಇಲ್ಲ. ಹಿಗಾಗಿಯೇ ಇದು ಕೇವಲ ಶೇ.20ರಷ್ಟು ನಿರ್ವಹಣಾ ಖರ್ಚು, ಶೇ.20 ಔಷಧಯಲ್ಲೇ ದ್ರಾಕ್ಷಿ ಕೈಗೆ ಸಿಗುತ್ತದೆ.





ರಾಜ್ಯದಲ್ಲಿ ಮೊದಲ ಬಾರಿಗೆ ಪರಿಚಯ: ಕ್ಯಾಲಿಫೋರ್ನಿಯಾದಿಂದ ನಾಸಿಕ್‌ಗೆ ಬಂದ ಈ ದ್ರಾಕ್ಷಿಯನ್ನು ರಾಜ್ಯದಲ್ಲಿಯೇ ಮೊಟ್ಟ ಮೊದಲ ಬಾರಿಗೆ ತಿಕೋಟಾದ ರೈತರು ಪರಿಚಯಿಸಿದ್ದಾರೆ. ವಿಜಯಪುರ ಜಿಲ್ಲೆಯ ತಿಕೋಟಾದ ರೈತರಾದ ಸಂದೀಪ ಪಾಟೀಲ 1.5 ಎಕರೆ, ಯಮನಪ್ಪ ಕೊಣ್ಣೂರ 1.5 ಎಕರೆ, ರಾಜೇಂದ್ರ ಕುಸೂರ 2 ಎಕರೆ, ಅತಾಲಟ್ಟಿ ಗ್ರಾಮದಲ್ಲಿ ಡಾ.ಸುಭಾಷ ಮುದನೂರ 8 ಎಕರೆ, ತಾಜಪೂರದ ರಾಜು ಹಾಲಳ್ಳಿ 2 ಎಕರೆ, ನಿಡೋಣಿಯ ರಾವುತ ದರ್ಗಾ 9 ಎಕರೆಯಲ್ಲಿ ದ್ರಾಕ್ಷಿ ನಾಟಿ ಮಾಡಿದ್ದಾರೆ. 2025 ಜನವರಿಯಲ್ಲಿ ನಾಟಿ ಮಾಡಿದ್ದು, ಸೆಪ್ಟೆಂಬರ್ ತಿಂಗಳಿನಲ್ಲಿ ನಾಸಿಕನಿಂದ ಔರಾ-36 ತಳಿಯ ಕಡ್ಡಿಗಳನ್ನು ತಂದು ಕಸಿ ಮಾಡಲಾಗಿದೆ. ಈ ಫಸಲು 2027 ಫೆಬ್ರುವರಿಯಲ್ಲಿ ತಿಕೋಟಾದ ರೈತರು ಬೆಳೆದ ದ್ರಾಕ್ಷಿಯ ಮೊದಲ ಫಸಲು ಮಾರುಕಟ್ಟೆಗೆ ಬರಲಿದೆ.

ಇದು ರೈತರಿಗೆ ಹೇಗೆ ಲಾಭದಾಯಕ: ಸಾಮಾನ್ಯವಾಗಿ ಎಲ್ಲ ದ್ರಾಕ್ಷಿಗಳು ಬೆಳೆಯಲು ಪ್ರತಿ ಎಕರೆಗೆ ಸಾಲಿನಿಂದ ಸಾಲಿಗೆ 10 ಅಡಿ, ಗಿಡದಿಂದ ಗಿಡಕ್ಕೆ 5 ಅಡಿ ಅಂತರದಲ್ಲಿ ನಾಟಿ ಮಾಡುವಂತೆ ಇದನ್ನು ಮಾಡಬಹುದು. ದ್ರಾಕ್ಷಿ ಬೆಳೆಯಲು ಪ್ರತಿ ಎಕರೆಗೆ ₹6-7 ಲಕ್ಷ ಖರ್ಚಾಗುತ್ತದೆ. ಈ ದ್ರಾಕ್ಷಿಗೆ 7-8 ಲಕ್ಷ ವೆಚ್ಚವಾಗುತ್ತದೆ. ಒಂದು ಎಕರೆಗೆ 12 ರಿಂದ 15 ಟನ್ ಇಳುವರಿ ಬರಲಿದ್ದು, ಇದು ಕೂಡ ಅಷ್ಟೆ ಇಳುವರಿ ಸಿಗಲಿದೆ. ಆದರೆ ಬೇರೆ ದ್ರಾಕ್ಷಿಗಳು ಪ್ರತಿ ಕೆಜಿಗೆ ₹ 40ರಿಂದ 60 ಮಾರಾಟವಾಗುತ್ತವೆ. ಔರಾ-36 ದ್ರಾಕ್ಷಿಯೂ ಈಗಾಗಲೇ ಪ್ರತಿ ಕೇಜಿಗೆ ₹150ರಿಂದ 160 ರಂತೆ ಸಾಂಗ್ಲಿ, ತಾಸಗಾಂವನಲ್ಲಿ ಮಾರಾಟವಾಗಿದ್ದು, ಅಲ್ಲಿಂದ ಯೂರೋಪಿಯನ್ ರಾಷ್ಟ್ರಗಳಿಗೆ ರಫ್ತಾಗುತ್ತಿದೆ.

ನಾನು ಬಿಎಸ್‌ಸಿ ತೋಟಗಾರಿಕೆ ಪದವಿ ಮುಗಿಸಿದ ಬಳಿಕ ರೈತರಾದ ನಮ್ಮ ತಂದೆಯ ಜೊತೆಯಲ್ಲಿ ದ್ರಾಕ್ಷಿ ಬೆಳೆ ಬೆಳೆಯುತ್ತಿದ್ದೆ. ಆದರೆ ಸ್ಥಳೀಯ ದ್ರಾಕ್ಷಿ ಬೆಳೆಗಳಲ್ಲಿ ಪ್ರತಿಬಾರಿಯೂ ಒಂದಲ್ಲ ಒಂದು ಸಮಸ್ಯೆಗಳು ಎದುರಾಗುತ್ತಿದ್ದವು. ಇದನ್ನು ತಪ್ಪಿಸಬೇಕು ಎಂದುಕೊಂಡು ನಾನು ಹೊಸ ಹೊಸ ವಿಚಾರ ಶೋಧಿಸಿದೆ. ಆಗ ನಾನು ನಾಸಿಕನಲ್ಲಿರುವ ಸಹ್ಯಾದ್ರೀ ಫಾರಂಗೆ ಭೇಟಿ ನೀಡಿದಾಗ ಅಲ್ಲಿ 2019ರಿಂದಲೇ ಪ್ರಾಯೋಗಿಕವಾಗಿ ಔರಾ-36 ಬೆಳೆಯಲಾಗುತ್ತಿತ್ತು. ನಂತರದಲ್ಲಿ 2024ರಲ್ಲಿ ರಾಜ್ಯದಲ್ಲಿ ಬೆಳೆಯಲು ಅನುಮತಿ ಸಿಕ್ಕ ಬಳಿಕ ನಾವು ತಂದಿದ್ದೇವೆ.

• **ಸಂದೀಪ ಪಾಟೀಲ** ದ್ರಾಕ್ಷಿ ಬೆಳೆದ ರೈತ.

ಔರಾ-36 ತಳಿಯ ವಿಶೇಷತೆ

ಇದು ನೋಡಲು ಕಂದು ಬಣ್ಣದಿಂದ ಕೂಡಿದ್ದು ಆಕರ್ಷಕವಾಗಿದೆ. ಇದನ್ನು 48 ಡಿಗ್ರಿ ತಾಪಮಾನದಲ್ಲಿಯೂ ಬೆಳೆಯಬಹುದಾಗಿದೆ. ಯಾವುದೇ ತಾಪಮಾನದಲ್ಲೂ ಶೇ.100ರಷ್ಟು ಹೂ ಬಿಡಲಿದೆ. ಉತ್ತಮ ಸೈಜು ಸಿಗಲಿದ್ದು, ಉತ್ತಮ ಬಣ್ಣ ಹೊಂದಿದೆ. ಉತ್ಕೃಷ್ಟವಾಗಿದ್ದು, ಬಹಳ ರುಚಿಕರವಾಗಿದೆ. ಈ ಫಸಲು ಬಂದಾಗ ಮಳೆಯಾದರೆ ದ್ರಾಕ್ಷಿ ಹಣ್ಣು ಸೀಳುವುದಿಲ್ಲ, ಬೇರೆ ದ್ರಾಕ್ಷಿಗಳಿಗೆ ಕಾಯಿ ದಪ್ಪ ಮಾಡಲು ರಾಸಾಯನಿಕ ಬಳಸಲಾಗುತ್ತದೆ. ಇದಕ್ಕೆ ಯಾವುದೇ ರಾಸಾಯನಿಕದ ಅಗತ್ಯವಿಲ್ಲ.

ಪುರಸಭಾ ಕಾರ್ಯಾಲಯ, ಬಿಡದಿ
ಬಿಡದಿ ಮುಖ್ಯ ರಸ್ತೆ, ರಾಮನಗರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ – 562109
ದೂರವಾಣಿ : 080–27282572 e-mail: ka.bidadi.tmc@gmail.com
website: http://www.bidaditown.mrc.gov.in

ಸಂ: ಪುಕಾಬಿ/ಆ.ಶಾ/ಇ–ಟೆಂಡರ್/ಸಿಆರ್/02/2025–26 ದಿನಾಂಕ: 08.05.2026

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ **ಪುರಸಭಾ ನಿಧಿ ಅನುದಾನದಡಿ** ಟೆಂಡರ್‌ನ್ನು ಆಹ್ವಾನಿಸಿದ್ದು. ಅರ್ಹ ಗುತ್ತಿಗೆದಾರರು ಕೆ.ಪಿ.ಪಿ.ಪಿ ಪೋರ್ಟಲ್ **https://kppp.karnataka.gov.in** ಮುಖಾಂತರ ಕರೆದಿರುವ ಟೆಂಡರ್‌ನಲ್ಲಿ ಭಾಗವಹಿಸಬಹುದು. ಮುಂದುವರೆದಂತೆ ಇಂಡೆಂಟ್ ನಂ ಹಾಗೂ ಅಂದಾಜು ಮೊತ್ತಗಳಂತೆ **(1)** DMA/2025-26/SE5674/CALL-3 (Other, **73.54 Lakhs** EMD - **147082/-**) ಗಳಿದ್ದು, ಕೆ.ಪಿ.ಪಿ.ಪಿ. ಪೋರ್ಟಲ್ **https://kppp.karnataka.gov.in** ಮುಖಾಂತರ ಡೌನ್‌ಲೋಡ್ ಮಾಡಿಕೊಂಡು **ದಿನಾಂಕ: 16.05.2026ರ ಸಂಜೆ 5:30 ಗಂಟೆ ಒಳಗಾಗಿ ಅಪ್‌ಲೋಡ್** ಮಾಡಬಹುದಾಗಿರುತ್ತದೆ. ಟೆಂಡರ್ ದಾಖಲೆಗಳಲ್ಲಿ ತಿಳಿಸಿರುವಂತೆ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳನ್ನು ಈ ಕಛೇರಿಯ ಆರೋಗ್ಯ ಶಾಖೆಯಿಂದ ಪಡೆಯಬಹುದು.

ಸಹಿ/– **ಅಧ್ಯಕ್ಷರು** ಪುರಸಭೆ, ಬಿಡದಿ
ಸಹಿ/– **ಮುಖ್ಯಾಧಿಕಾರಿ** ಪುರಸಭೆ, ಬಿಡದಿ
DIPR/BSD/51/SA/2026-27

ಕರ್ನಾಟಕ ಸರ್ಕಾರ
ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ
6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003.
ದೂರವಾಣಿ: 080–23349434, e-mail: dpikseab@gmail.com
ಸಂಖ್ಯೆ: KSEAB/DPIE/B4(OTR)/1/2026-BSEC/90135 ದಿನಾಂಕ: 08.05.2026

ಇ–ಟೆಂಡರ್ ಪ್ರಕಟಣೆ

ನಿರ್ದೇಶಕರು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ, ಇವರು **"2026 ನೇ ಸಾಲಿನ ಎಸ್.ಎಸ್.ಎಲ್.ಸಿ ಮತ್ತು ಇತರೆ ಪರೀಕ್ಷೆಗಳ ಪೂರ್ವ ಮುದ್ರಿತ ಉತ್ತೀರ್ಣ ಪ್ರಮಾಣಪತ್ರಗಳು, ಪರಿವರ್ತನೀಯ ದತ್ತಾಂಶಗಳ ಮೇಲುಮುದ್ರಣ ಸಹಿತ ಸರಬರಾಜು"** ಕಾರ್ಯಕ್ಕೆ ಅರ್ಹ ಸಂಸ್ಥೆಗಳಿಂದ ಇ–ಟೆಂಡರ್ ಅರ್ಜಿಗಳನ್ನು ಕೆ.ಟಿ.ಪಿ.ಪಿ. ಅಧಿನಿಯಮ–1999 ಮತ್ತು ಕೆ.ಟಿ.ಪಿ.ಪಿ. ನಿಯಮಗಳು–2000, ಅಡಿಯಲ್ಲಿ ಆಹ್ವಾನಿಸಲಾಗಿದೆ.

ಟೆಂಡರ್‌ಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ವೇದಿಕೆ ಮೂಲಕ ಮಾತ್ರ ಸಲ್ಲಿಸತಕ್ಕದ್ದು. ಟೆಂಡರ್ ದಸ್ತಾವೇಜುಗಳನ್ನು ಮಂಡಲಿಯ ಅಂತರ್ಜಾಲತಾಣ **https://Kseab.karnataka.gov.in** ಮತ್ತು **https://kppp.karnataka.gov.in** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಪ್ರಾರಂಭ **ದಿನಾಂಕ: 08.05.2026,** ಟೆಂಡರ್ ಪೂರ್ವ ಬಿಡ್ ಸಭೆ **ದಿನಾಂಕ: 15.05.2026ರ ಪೂರ್ವಾಹ್ನ 11.30 ಗಂಟೆ,** ಟೆಂಡರ್ ಸಲ್ಲಿಸಲು ಅಂತಿಮ **ದಿನಾಂಕ: 22.05.2026ರ ಸಂಜೆ 5.00 ಗಂಟೆ.** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 25.05.2026ರ ಪೂರ್ವಾಹ್ನ 11.30 ಗಂಟೆ,** ವಾಣಿಜ್ಯ ಬಿಡ್ ತೆರೆಯುವ ತಾತ್ಕಾಲಿಕ **ದಿನಾಂಕ: 27.05.2026 ಪೂರ್ವಾಹ್ನ 11.30 ಗಂಟೆ,** ಸದರೀ ಟೆಂಡರ್‌ನ ಅಂದಾಜು ಮೌಲ್ಯ **ರೂ.30,14,000/–** ಮತ್ತು ಮುಂಗಡ ಠೇವಣಿ **ರೂ.60,280/– ಗಳಾಗಿದ್ದು** ಹೆಚ್ಚಿನ ವಿವರಗಳನ್ನು ಮಂಡಲಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ನಿರ್ದೇಶಕರು, ಪರೀಕ್ಷೆಗಳು

CAUVERY ® **ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ.45, 3ನೇ ಮಹಡಿ, ಕೆ.ಎಸ್.ಹೆಚ್.ಡಿ.ಸಿ.ಎಲ್ ಕಾಂಪ್ಲೆಕ್ಸ್, ಎಂ.ಜಿ.ರಸ್ತೆ, ಬೆಂಗಳೂರು–01. ದೂ: 080–25582656/ 71204445/ 71204446
ಇ–ಮೇಲ್: **gmmkshdcl@gmail.com**
ವೆಬ್‌ಸೈಟ್: **http://www.cauverycrafts.com**
ಕಡತದ ಸಂಖ್ಯೆ: ಕೆಎಸ್‌ಹೆಚ್‌ಡಿಸಿಎಲ್/ಎಂಕೆಟಿಜಿ/ಇ–ಟೆಂಡರ್/137/2026–27, ದಿನಾಂಕ: 08.05.2026
ಟೆಂಡರ್ ಉಲ್ಲೇಖ ಸಂಖ್ಯೆ: ಕೆಎಸ್‌ಹೆಚ್‌ಡಿಸಿಎಲ್/2026–27/ಐಎನ್‌ಡಿ0017

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತವು (ಕೆಎಸ್‌ಹೆಚ್‌ಡಿಸಿಎಲ್) ಪ್ರಕಟಣೆಯಲ್ಲಿ ನಿರ್ದಿಷ್ಟಪಡಿಸಿರುವ ವಿವರಣೆಯಂತೆ ಅನುಮೋದನೆ ಮೇಲೆ ಮಾರಾಟದ (ಎಸ್‌ಒಎ) ಆಧಾರದ ಮೇಲೆ **ಚಿನ್ನದ ಲೇಪನ ಮಾಡಿದ, ಗಂಡಬೇರುಂಢ ಇರುವ 92.5 ಸ್ಟರ್ಲಿಂಗ್ ಬೆಳ್ಳಿ ಪದಕಗಳು ಜೊತೆಗೆ ಅಗತ್ಯ ಸಹಾಯಕ ಭಾಗಗಳ ತಯಾರಿಕೆ ಮತ್ತು ಸರಬರಾಜಿಗಾಗಿ** ಅರ್ಹ ಟೆಂಡರುದಾರರುಗಳಿಂದ ದ್ವಿ ಲಕೋಟೆ ಟೆಂಡರ್ ಕ್ರಮದಲ್ಲಿ ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಿರುವುದು. ಟೆಂಡರ್ ಪ್ರಕಟಣೆ ವಿವರಗಳನ್ನು ವೆಬ್‌ಸೈಟ್: **www.kppp.karnataka.gov.in** ಇಲ್ಲಿಗೆ ಲಾಗಿನ್ ಆಗುವ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಪಡೆದುಕೊಳ್ಳಬಹುದು. ಟೆಂಡರ್ ದಸ್ತಾವೇಜುಗಳನ್ನು ಪಡೆಯಲು ಪ್ರಾರಂಭವಾಗುವ **ದಿನಾಂಕ: 08.05.2026.** ಬಿಡ್‌ಗಳನ್ನು ಸಲ್ಲಿಸುವ ಕಡೆಯ ದಿನಾಂಕ ಮತ್ತು ಸಮಯ: **15.05.2026.**

ಸಹಿ/– ಪ್ರಧಾನ ವ್ಯವಸ್ಥಾಪಕರು (ಮಾರುಕಟ್ಟೆ)

ಕರ್ನಾಟಕ ಸರ್ಕಾರ ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಕಾರವಾರ ಉಪ–ವಿಭಾಗ, ಕಾರವಾರ
ಎಂಜಿ ರಸ್ತೆ, ಕಾಜುಬಾಗ, ಕಾರವಾರ–581301. (ಉ.ಕ.)
ದೂರವಾಣಿ: 08382–226365 ಇ–ಮೇಲ್: acfkwr@gmail.com
ನಂ. ಪಿ3/ಸಅಸಂ/ವಿವ–/ಇ-ಮರುಟೆಂಡರ್–6/2025–26 ದಿನಾಂಕ: 02–05–2026

ಟೆಂಡರ್ ಪ್ರಕಟಣೆ

2026–27ನೇ ಸಾಲಿಗೆ ವಿವಿಧ ಯೋಜನೆಯಡಿ 2026ನೇ ಮಳೆಗಾಲದಲ್ಲಿ ನೆಡುತೋಪು ರಚನೆ / ನಿರ್ವಹಣೆ, ನರ್ಸರಿ ಕಾಮಗಾರಿ ಇತ್ಯಾದಿ ಕಾಮಗಾರಿ ಸಂಕ್ಷಿಪ್ತ ಇ–ಟೆಂಡರ ಕರೆಯಲಾಗಿರುತ್ತದೆ. ಮರು ಇ–ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 12–05–2026 ಆಗಿದ್ದು, ಹೆಚ್ಚಿನ ಮಾಹಿತಿಗಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಕಾರವಾರ ವಿಭಾಗ, ಕಾರವಾರ ರವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸುವದು. (ದೂರವಾಣಿ ಸಂಖ್ಯೆ: 08382–226365).

DIPR/KWR/KSMCA/113/26-27 Dt. 07.05.2026

GTTC **ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ**
ರಾಜಾಜಿನಗರ ಕೈಗಾರಿಕಾ ವಸಾಹತು, ಬೆಂಗಳೂರು–560 010.
ದೂ.ಸಂ.: 080–23152118/119, 23384303,
ಫ್ಯಾಕ್ಸ್: 080–23301683, ವೆಬ್‌ಸೈಟ್: https://gttc.karnataka.gov.in

ಎಲೆಕ್ಟ್ರಾನಿಕ್ ಟೆಂಡರ್ ಪ್ರಕಟಣೆ

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರವು (ಜಿಟಿಟಿಸಿ), **ಟರ್ನ್ ಕೀ ಆಧಾರದ ಮೇಲೆ ಇಂಡಸ್ಟ್ರಿಯಲ್ ಕಂಟ್ರೋಲ್ ಸಿಸ್ಟಮ್ ಮತ್ತು ಆಟೋಮೇಷನ್‌ನಲ್ಲಿ ಜಾಗತಿಕ ಸಾಮರ್ಥ್ಯ ಕೇಂದ್ರವನ್ನು ಸ್ಥಾಪಿಸಲು ಇ–ಟೆಂಡರ್ ಆಹ್ವಾನಿಸಿದೆ.** GTTC/MSDC/TENDER/ICS&ALab./BD-288/2025-26 ಇ–ಟೆಂಡರ್ ಮೂಲಕ ಆಫರ್‌ಗಳನ್ನು ಅಪ್‌ಲೋಡ್ ಮಾಡಲು **ಕೊನೆಯ ದಿನಾಂಕ: 10.06.2026.** ಇನ್ನಿತರೆ ವಿವರಗಳಿಗಾಗಿ ವೆಬ್‌ಸೈಟ್ **https:/kppp.Karnataka.gov.in**ಗೆ ಲಾಗ್‌ಆನ್ ಆಗಿ. **ಸಹಾಯವಾಣಿ ಸಂಖ್ಯೆ : +91 9240214000, +91 9240214001.**

ಸಹಿ/– ಟೆಂಡರ್ ಆಹ್ವಾನಿಸುವ ಪ್ರಾಧಿಕಾರ

ಪುರಸಭಾ ಕಾರ್ಯಾಲಯ, ಪಿರಿಯಾಪಟ್ಟಣ
ಮೈಸೂರು ಜಿಲ್ಲೆ – 571107, ದೂ: 08223–273036
ಇ–ಮೇಲ್: itstaff_ulb_periyapatna@yahoo.com
ಸಂಖ್ಯೆ: ಪಿಪುಸ/ಪ.ಅ/ಟೆಂಡರ್–01–04/2026–27 **ದಿನಾಂಕ:** 06.05.2026

ಮರು ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮೂಲಕ)

ಪಿರಿಯಾಪಟ್ಟಣ ಪುರಸಭೆಯ ವಿವಿಧ ಸೇವೆಗಳನ್ನು ಅರ್ಹರಿಂದ ಪಡೆಯಲು 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಟೆಂಡರ್‌ದಾರರು **https://kppp.karnataka.gov.in** ಪೋರ್ಟಲ್ ಮೂಲಕ ಟೆಂಡರ್ ಷರತ್ತು ಹಾಗೂ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. **1)** ಟೆಂಡರ್‌ನ್ನು ಸಲ್ಲಿಸಲು ಕಡೆಯ **ದಿನಾಂಕ: 21.05.2026 ಸಂಜೆ 5:00 ಗಂಟೆಯವರೆಗೆ. 2)** ಟೆಂಡರ್ ತೆರೆಯುವ **ದಿನಾಂಕ: 22.05.2026ರ ಬೆಳಿಗ್ಗೆ 11.00 ಗಂಟೆಗೆ** ಅಥವಾ ಮುಂದೆ ಸೂಚಿಸುವ ದಿನಾಂಕದಂದು ತೆರೆಯಲಾಗುವುದು.

ಕ್ರ ಸಂ.	ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಕಾಲಾವಧಿ
1	DMA/2026-27/SE7686/CALL-2	16.10	40250	12 ತಿಂಗಳು
2	DMA/2026-27/SE7671/CALL-2	6.38	15970	12 ತಿಂಗಳು

ಸೂಚನೆ: 1) ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಕೆಪಿಪಿಪಿ ಪೋರ್ಟಲ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು **https://kppp.karnataka.gov.in** ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/– ಮುಖ್ಯಾಧಿಕಾರಿ ಪುರಸಭೆ, ಪಿರಿಯಾಪಟ್ಟಣ
DIPR/MYS/148/SA/2026-27

ಕರ್ನಾಟಕ ಸರ್ಕಾರ
ಕರ್ನಾಟಕ ಮೃಗಾಲಯ ಪ್ರಾಧಿಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳವರ/ ಉಪ ನಿರ್ದೇಶಕರವರ ಕಾರ್ಯಾಲಯ ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ ಕಲಬುರಗಿ
ಇಮೇಲ್: dcf_tgulbarga@yahoo.co.in ಕಛೇರಿ ದೂ. ಸಂ. 08472-256601
ಸಂಖ್ಯೆ: ಉನಿ/ಕಿ.ಮೃ/ಹೊರಗುತ್ತಿಗೆ ನೌಕರರ/ಟೆಂಡರ್/ಸಿ.ಆರ್/2026–27 ದಿನಾಂಕ : 07–05–2026

:: ಅಲ್ಪಾವಧಿಯ ಇ–ಟೆಂಡರ್ ಪ್ರಕಟಣೆ ::

(**Karnataka Public Procurement Portal ನಡಿಯಲ್ಲಿ ಮಾತ್ರ**)

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು/ಉಪ ನಿರ್ದೇಶಕರು ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ ಕಲಬುರಗಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಮಾನವ ಸಂಪನ್ಮೂಲ ಒದಗಿಸುವ ಟೆಂಡರನ್ನು Karnataka Public Procurement Portal ನಡಿಯಲ್ಲಿ ಆಹ್ವಾನಿಸಲಾಗಿದ್ದು. **ಸದರಿ ವಿವರ ಈ ಕೆಳಗಿನಂತಿವೆ.**
ವಿವರ : ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು/ಉಪ ನಿರ್ದೇಶಕರು ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ ಕಲಬುರಗಿ ರವರಿಂದ ಇ–ಟೆಂಡರ್ ಆಹ್ವಾನಿಸಲಾಗಿದೆ.
1) ಕಾಮಗಾರಿ : ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ ಕಲಬುರಗಿ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸಲು ಮಾನವ ಸಂಪನ್ಮೂಲ ಒದಗಿಸುವ ಟೆಂಡರ್, 2) ಟೆಂಡರ್‌ಗಿಟ್ಟ ಮೊತ್ತ : **ಕನಿಷ್ಠ ರೂ. 57.00 ಲಕ್ಷ, ಗರಿಷ್ಠ ರೂ. 57.00 ಲಕ್ಷ,** 3) ಲೆಕ್ಕ ಶೀರ್ಷಿಕೆ : ZAK, 4) ಅರ್ಹತೆ : As per tender documents, 5) ಟೆಂಡರ್‌ಗೆ ಸಂಬಂಧಿಸಿದಂತೆ, ಪ್ರಶ್ನೆಗಳು ಮತ್ತು ಸ್ಪಷ್ಟೀಕರಣ ಕೇಳಲು ಕೊನೆಯ ದಿನಾಂಕ : **13–05–2026 ಸಾಯಂಕಾಲ 4.00 ಗಂಟೆಗೆ,** 6) ತಾಂತ್ರಿಕ ಹಾಗೂ ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **14–05–2026 ಸಾಯಂಕಾಲ 4.00 ಗಂಟೆಗೆ,** 7) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **15–05–2026 ರಂದು ಸಾಯಂಕಾಲ 4.30 ಗಂಟೆಗೆ,** 8) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **17–05–2026 ರಂದು ಸಾಯಂಕಾಲ 5.00 ಗಂಟೆಗೆ,** 9) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ : ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು/ಉಪ ನಿರ್ದೇಶಕರು ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ ಕಲಬುರಗಿ, ಎಸ್.ಬಿ. ಟೆಂಪಲ್ ರೋಡ, ಕಲಬುರಗಿ. 10) ಅಂತರಜಾಲ ತಾಣದ ವಿಳಾಸ : http:kppp.karnataka.gov.in

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು/ಉಪ ನಿರ್ದೇಶಕರು ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/102/ಕೆ.ಎಸ್.ಎಂ.ಸಿ.&ಎ/2026–27

ಕರ್ನಾಟಕ ಸರ್ಕಾರ
ಕಾರ್ಯಾಲಯ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೀದರ.
ಸಂ: ಕಾನಿಅ/ಪಂರಾಇಂವಿ/ಬೀದರ/ತಾಶಾ–2/2026–27/159 ದಿನಾಂಕ: 07.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ, (ಇ–ಪ್ರೊಕ್ಯೂರಮೆಂಟ್)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ ರಾಜ್ ಇಂಜಿನಿಯರಿಂಗ ವಿಭಾಗ, ಬೀದರ ಇವರಿಂದ ವಿವಿಧ ಯೋಜನೆಯಡಿ ಮಂಜೂರಾದ 27 ಕಾಮಗಾರಿಗಳಿಗೆ (ಕನಿಷ್ಟ **ರೂ. 4,15,820.42** (Rupees Four Lakhs Fifteen Thousand Eight Hundred Twenty and paise forty two only) ಮತ್ತು ಗರಿಷ್ಟ **167,84,805.38 ಮೊತ್ತದ** (Rupees One Crore Sixty Seven Lakhs Eighty Four Thousand Eight Hundred Five and paise thirty eight only) ಗುತ್ತಿಗೆದಾರರನ್ನು ನೇಮಿಸಲು, ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಆರ್ಹ ಗುತ್ತಿಗೆದಾರರಿಂದ ಕೆ.ಟಿ.ಪಿ.ಪಿ. ಕಾಯ್ದೆ ಹಾಗೂ ಕೆ.ಡಬ್ಲ್ಯೂ–01, 02, 03 ಹಾಗೂ 04ರ ನಿಬಂಧನೆಗೊಳಪಟ್ಟು ಕೆ.ಪಿ.ಪಿ.ಪಿ.ನಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಅಂತರಜಾಲ ತಾಣ https://kppp.karnataka.gov.inನ್ನು ಸಂಪರ್ಕಿಸಬಹುದು.(Work Indent No:– 26578, 26406, 26564, 26561, 26547, 26013, 26247, 25188, 25189, 25190, 26293, 26291, 26289, 21574/CALL–2, 26405, 26546, 26545, 26442, 26441, 26440, 26439, 25393/CALL-2, 25447, 26548, 26580, 24965/CALL–2, 24968/CALL–2). ಟೆಂಡರ್ ಪ್ರಕ್ರಿಯೆ ದಿನಾಂಕಗಳು: 1. ಇ–ಪ್ರಾಕ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 08.05.2026 ರಿಂದ 18.05.2026 16:00 ಗಂಟೆವರೆಗೆ 2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 19.05.2026 ರಂದು 16:00 ಗಂಟೆ ನಂತರ 3. ಅರ್ಥಿಕ ಬಿಡ್ ತೆರೆಯುವ ದಿನಾಂಕ : 22.05.2026 ರಂದು 11:00 ಗಂಟೆ ನಂತರ

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬೀದರ.
ವಾ.ಸಾ.ಸಂ.ಇ/ಬೀದರ/30/ಕೆ.ಎಸ್.ಎಂ.ಸಿ.&ಎ/2026–27

ಕರ್ನಾಟಕ ಸರ್ಕಾರ
ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಕಛೇರಿ, ಪಿ.ಎಂ ಪೋಷಣ್ ಶಕ್ತಿ ನಿರ್ಮಾಣ್ (ಮ.ಉ.ಯೋ) ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿ.
email: eokodagumms@gmail.com
ಅದಾ:ಆಹಾರ ಸಾಗಾಣಿಕೆ ಟೆಂಡರ್/11/2025–26 ದಿನಾಂಕ:06.05.2026

ಆಹಾರ ಸಾಗಾಣಿಕೆ ಟೆಂಡರ್ e-procurement ಪ್ರಕಟಣೆ

ಕೊಡಗು ಜಿಲ್ಲೆಯ ಮೂರು ತಾಲ್ಲೂಕುಗಳ ಕೆ.ಎಫ್.ಸಿ.ಎಸ್.ಸಿ ಗೋದಾಮಿನಿಂದ ಅಕ್ಕಿ, ಗೋಧಿ, ತೊಗರಿಬೇಳೆ, ಸೂರ್ಯಕಾಂತಿ ಎಣ್ಣೆ ಆಹಾರ ಸಾಮಾಗ್ರಿಗಳನ್ನು ಆಯಾ ತಾಲ್ಲೂಕುಗಳ ಸರ್ಕಾರಿ ಮತ್ತು ಅನುದಾನಿತ ಶಾಲಾ ಅಡುಗೆ ಕೇಂದ್ರಗಳಿಗೆ ಸರಬರಾಜು ಮಾಡಲು ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು, ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿರವರಿಂದ ತಾಲ್ಲೂಕುವಾರು ಟೆಂಡರ್‌ಗಳನ್ನು e-procurement ಮೂಲಕ ಆಹ್ವಾನಿಸಲಾಗಿದೆ. (www.kppp.karnataka.gov.in) ಆಸಕ್ತಿಯುಳ್ಳವರು ಆರ್.ಸಿ ಹೊಂದಿದ (ಆರ್.ಟಿ.ಓ ಕಛೇರಿಯಲ್ಲಿ ನೊಂದಾಯಿಸಲ್ಪಟ್ಟ) ಲಾರಿ ಮಾಲೀಕರು, ಟೆಂಡರ್ ಹಾಕಲು ಇಚ್ಚೆ ಉಳ್ಳವರು KPPP portal ರಲ್ಲಿ ತಿಳಿಸಿದಂತೆ Tender Processing Fee ಯನ್ನು ಆನ್‌ಲೈನ್ ಮೂಲಕ ಸಲ್ಲಿಸತಕ್ಕದ್ದು, ಹೆಚ್ಚಿನ ವಿವರಗಳಿಗಾಗಿ www.eproc.karnataka.gov.in ಮೂಲಕ ಮಾಹಿತಿಯನ್ನು ಪಡೆಯಬಹುದಾಗಿದೆ.

1	ಟೆಂಡರ್ ಸಲ್ಲಿಸಲು ಪ್ರಾರಂಭ ದಿನಾಂಕ	ದಿನಾಂಕ:11.05.2026ರ ಬೆಳಗ್ಗೆ 10.30 ರಿಂದ
2	e-Tender ಸಲ್ಲಿಸಲು ಕೊನೆಯ ದಿನಾಂಕ	ದಿನಾಂಕ: 25.05.2026ರ ಸಂಜೆ 05.30 ಗಂಟೆ
3	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	ದಿನಾಂಕ:27.05.2026 ರ ಬೆಳಿಗ್ಗೆ 11.30 ಗಂಟೆ
4	ಆರ್ಥಿಕ ಬಿಡ್ ತೆರೆಯುವ ದಿನಾಂಕ	ದಿನಾಂಕ:29.05.2026 ರ ಬೆಳಿಗ್ಗೆ 11.30 ಗಂಟೆ

ಕ್ರ ಸಂ	ತಾಲ್ಲೂಕು	ಅಡುಗೆ ಕೇಂದ್ರಗಳ ಸಂಖ್ಯೆ	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)
1	ಮಡಿಕೇರಿ	128	9350/–
2	ವಿರಾಜಪೇಟೆ	152	14625/–
3	ಸೋಮವಾರಪೇಟೆ	174	13800/–

ಹೆಚ್ಚಿನ ವಿವರಗಳಿಗೆ www.kppp.karnataka.gov.in KPPP portal ಅಥವಾ ಶಿಕ್ಷಣಾಧಿಕಾರಿಗಳು, ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿ ರವರ ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಸಹಿ/– ಶಿಕ್ಷಣಾಧಿಕಾರಿಗಳು,
ಪಿ.ಎಂ.ಪೋಷಣ್ ಶಕ್ತಿ ನಿರ್ಮಾಣ್ (ಮ.ಉ.ಯೋ)
ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿ

ಕರ್ನಾಟಕ ಸರ್ಕಾರ – ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಶಿವಮೊಗ್ಗ ವಿಭಾಗ, ಶಿವಮೊಗ್ಗ
ಪ್ರಾದೇಶಿಕ ವಿಭಾಗ ಕಛೇರಿ ಡಿ.ಸಿ ಕಾಂಪೌಂಡ್, ಶಿವಮೊಗ್ಗ–577201
phone:08182-272210 FAX No: 08182-22565 EmailID: dcf.shivamoga@gmail.com
ಸಂಖ್ಯೆ: ಬಿ2/ಲಾಗಿಂಗ್/ಇ–ಹರಾಜು/ಆಲ್ಕೋಳ/ಸಿಆರ್–28/ ದಿನಾಂಕ: 28.04.2026

ಅರಣ್ಯ ಉತ್ಪನ್ನಗಳ ಇ–ಹರಾಜಿಗೆ ಸಂಬಂಧಪಟ್ಟ ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಶಿವಮೊಗ್ಗ ವಿಭಾಗದ ಸರ್ಕಾರಿ ನಾಟಾ ಸಂಗ್ರಹಾಲಯ, ಆಲೋಳ, ಶಿವಮೊಗ್ಗ ಇಲ್ಲಿ ದಾಸ್ತಾನು ಇರುವ ನಾಟಾ/ ಸೌದೆ/ ಬಿಲ್ಲೇಟ್/ ಪೋಲ್ಸ್ ಗಳನ್ನು ದಿನಾಂಕ: 30–05–2026 ರಂದು ಇ–ಹರಾಜು ಮೂಲಕ ವಿಲೇವಾರಿ ಮಾಡಲು ದಿನಾಂಕವನ್ನು ನಿಗದಿಪಡಿಸಲಾಗಿರುತ್ತದೆ. ಸದರಿ ಹರಾಜಿನಲ್ಲಿ ಈ ಕಛೇರಿಯ ಸವಿಸ್ತಾರ ಹರಾಜು ಪುಕಟಣೆ ಸಂಖ್ಯೆ: ಬಿ2/ಲಾಗಿಂಗ್/ಇ–ಹರಾಜು/ಆಲ್ಕೋಳ/ಸಿಆರ್–28/2025–26 ದಿನಾಂಕ: 28–04–2026 ರಲ್ಲಿ ತಿಳಿಸಿರುವ ಷರತ್ತಿಗೊಳಪಟ್ಟು ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಇ ಹರಾಜಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.ಹಾಗೂ ಇ–ಹರಾಜಿನ ಕುರಿತು ವಿವರಗಳನ್ನು ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್ www.etimber.in www.mstcecommerce.com ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಇ–ಹರಾಜಿಗೆ ಇಟ್ಟಿರುವ ಅರಣ್ಯ ಉತ್ಪನ್ನಗಳ ವಿವರ

ಕ್ರ ಸಂ	ಉಗ್ರಾಣದ ಹೆಸರು	ಉತ್ಪನ್ನಗಳ ವಿವರ		ಲಾಟ್ ಸಂಖ್ಯೆ	ಅಂದಾಜು ಪ್ರಮಾಣ (ಎಂ3 ಗಳಲ್ಲಿ)	ದಿನಾಂಕ ಮತ್ತು ಸೆಷನ್ಸ್
1	ಜಿ.ಟಿ.ಡಿ ಆಲ್ಕೋಳ ಶಿವಮೊಗ್ಗ	ಅಕೇಶಿಯಾ	ನಾಟಾ	120	6819-1173.277	30.05.2026 4 ession
2		ಅಕೇಶಿಯಾ ಸ್ಪಿಂಗ್ ವೆಲ್	ನಾಟಾ	05	7=1.353	
3		ಬೀಟೆ	ನಾಟಾ	51	253=20.329	
4		ಸಾಗುವಾನಿ	ನಾಟಾ	105	835=46.873	
5		ಇತರೆ ಜಾತಿ	ನಾಟಾ	148	375=93.488	
6		ಅಕೇಶಿಯಾ	ಸೈಜಸ್	01	5=0.055	
7		ಬೀಟೆ	ಸೈಜಸ್	03	28=1.340	
8		ಸಾಗುವಾನಿ	ಸೈಜಸ್	12	85=2.764	
9		ಇತರೆ ಜಾತಿ	ಸೈಜಸ್	03	20=0.383	
10		ಅಕೇಶಿಯಾ	ಪೋಲ್ಸ್	14	278 ಸಂಖ್ಯೆ	
11		ಅಕೇಶಿಯಾ ಸ್ಪಿಂಗ್ ವೆಲ್	ಪೋಲ್ಸ್	01	03 ಸಂಖ್ಯೆ	
12		ಬೀಟೆ	ಪೋಲ್ಸ್	01	04 ಸಂಖ್ಯೆ	
13		ಸಾಗುವಾನಿ	ಪೋಲ್ಸ್	14	229 ಸಂಖ್ಯೆ	
14		ಇತರೆ ಜಾತಿ	ಪೋಲ್ಸ್	06	325ಸಂಖ್ಯೆ	
15		ಅಕೇಶಿಯಾ	ಬಿಲ್ಲೇಟ್ಸ್	03	32.506	
16		ಬೀಟೆ	ಬಿಲ್ಲೇಟ್ಸ್	03	1.848	
17		ಸಾಗುವಾನಿ	ಬಿಲ್ಲೇಟ್ಸ್	04	1.061	
18		ಎನ್.ಟಿ.ಎಫ್.ಪಿ	–	01	60 ಸಂಖ್ಯೆ	
		ಒಟ್ಟು ಲಾಟ್ ಸಂಖ್ಯೆ		495		

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26–27/35/05/204

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ
ಬೆಳಗುಂಬ ರಸ್ತೆ, ತುಮಕೂರು – 572103 ಫ್ಯಾಕ್ಸ್ : 0816–2255761 ದೂರವಾಣಿ : 2272280
website: tumakuru.uda.gov.in, email: tudatmk2009@yahoo.co.in
ಕ್ರಮಾಂಕ ಟಿಯುಡಿಎ/ಸಮುದಾಯ ಭವನ/ಇ–ಹರಾಜು/01/2026–27 ದಿನಾಂಕ : 07–05–2026

ಇ–ಹರಾಜು ಪ್ರಕಟಣೆ

ಮರಳೂರು ಸರ್ವೆ ನಂಬರ್‌ನಲ್ಲಿ ನಿರ್ಮಿಸಿರುವ ಸಮುದಾಯ ಭವನದ ನಿರ್ವಹಣೆಗೆ ಇ–ಹರಾಜು ಪ್ರಕಟಣೆ

1)	ಇ–ಹರಾಜಿನ ಪ್ರಕ್ರಿಯೆಯು ಪ್ರಾರಂಭವಾಗುವ ದಿನಾಂಕ	:	ದಿನಾಂಕ : 07–05–2026
2)	ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಪ್ರೋಸೆಸಿಂಗ್ ಶುಲ್ಕ ಮತ್ತು ಇ.ಎಂ.ಡಿ ಪಾವತಿಸುವ ಕೊನೆಯ ದಿನಾಂಕ ಹಾಗೂ ಸಮಯ	:	ದಿನಾಂಕ : 21–05–2026 ಸಾಯಂಕಾಲ : 5.00 ಗಂಟೆವರೆಗೆ
3)	ಇ–ಹರಾಜಿನಲ್ಲಿ ಬಿಡ್ ಮಾಡುವ ಸಮಯ	:	ದಿನಾಂಕ : 22–05–2026 ರ ಬೆಳಿಗ್ಗೆ 10.00 ಗಂಟೆಯಿಂದ ಸಾಯಂಕಾಲ 5.00 ಗಂಟೆಗೆ ಮುಕ್ತಾಯಗೊಳ್ಳುತ್ತದೆ. (ಡೆಲ್ಟಾ ಟೈಮ್ 0.05.00 ನಿಮಿಷ)

ತುಮಕೂರು ನಗರದ ಕುಣಿಗಲ್ ರಸ್ತೆ ಹಾಗೂ ರಿಂಗ್ ರಸ್ತೆಗೆ ಹೊಂದಿಕೊಂಡಂತೆ ಇರುವ ಪ್ರಾಧಿಕಾರದಿಂದ ರಚಿಸಿರುವ ಮರಳೂರು ಸರ್ವೆ ನಂಬರ್‌ನಲ್ಲಿ ನಿರ್ಮಿಸಲಾಗಿರುವ ಸಮುದಾಯ ಭವನವನ್ನು ಬಾಡಿಗೆ ನೀಡುವ ಬಗ್ಗೆ.

ಕ್ರ ಸಂ	ಸ್ಥಳ	ವಿಸ್ತೀರ್ಣ ಚ.ಮೀ. ಗಳಲ್ಲಿ	ಕನಿಷ್ಠ ಮಾಸಿಕ ಪ್ರೀಮಿಯಂ ರೂ. ಗಳಲ್ಲಿ	ಪಾವತಿಸ ಬೇಕಾಗಿರುವ. ಇ.ಎಂ.ಡಿ. ಮೊತ್ತ ರೂ. ಗಳಲ್ಲಿ	ಪಾವತಿಸಬೇಕಾದ ಠೇವಣಿ ಮೊಬಲಗು ರೂ. ಗಳಲ್ಲಿ
1	ಮರಳೂರು ಸಮುದಾಯ ಭವನ	ಕೆಳ ಮಹಡಿ 6804 ಚ.ಅ ನೆಲಮಹಡಿ 6410 ಚ.ಅ 1ನೇ ಮಹಡಿ 4256 ಚ.ಅ ಹಾಗೂ ಪಾರ್ಕಿಂಗ್ ಸ್ಥಳ: 13000 ಚ.ಅ	3,00,000	6,48,000	21,60,000

ವೆಬ್‌ಸೈಟ್ : kppp.karnataka.gov.in ಹಾಗೂ **website:tumakuru.uda.gov.in** ನಲ್ಲಿ ಇ–ಹರಾಜಿನ ಸಂಬಂಧ ಷರತ್ತು, ನಿಯಮ, ನಿಬಂಧನೆಗಳ ವಿವರಗಳನ್ನು ಮೇಲ್ಕಂಡ ವೈಬ್‌ಸೈಟ್‌ನಲ್ಲಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ ಮತ್ತು ಇ–ಹರಾಜಿಗೆ ಸಂಬಂಧಿಸಿದಂತೆ ಯಾವುದಾದರೂ ಬದಲಾವಣೆ ಇದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು, ಯಾವುದೇ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ.

ಸಹಿ/– (ಶುಭ ಕಲ್ಯಾಣ್) ಭಾ.ಆ.ಸೇ., ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳು ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು
ಸಹಿ/– (ಉಮೇಶ್‌ಚಂದ್ರ ಎನ್.ಆರ್.) ಕೆ.ಎ.ಎಸ್., ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು
DIPR/TUM/RO-26/26-27/Oysters